The Senior Deputy Director
Local Audit Circle,
Door No-SA-1, 2nd floor,
Jilladalita Bhavana,
Chikkaballapura-562101
Phone No-08156 277033
Email: lac.chikkaballapura@gmail.com

ಕರ್ನಾಟಕ ಸರ್ಕಾರ
(ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ)

ಹಿರಿಯ ಉಪ ನಿರ್ದೇಶಕರವರ ಕಛೇರಿ,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ಸಾತನೆ ಸಂಖ್ಯೆ-SA-1, 2ನೇ ಮಹಡಿ,
ಜಿಲ್ಲಾಡಳಿತ ಭವನ,
ಚಿಕ್ಕಬಳ್ಳಾಪುರ-562101
ದೂರವಾಣಿ ಸಂಖ್ಯೆ-08156 277033
ಇ-ಮೇಲ್: aci.cchikkaballapura@gmail.com

ಸಂಖ್ಯೆ:ಹಿಉನಿ/ಸ್ಥಲೆಪವ/ಚಿಪು/2017-18/33

ದಿನಾಂಕ: 28/4/2017

ಇವರಿಗೆ

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಚಿಕ್ಕಬಳ್ಳಾಪುರ.

102 22/5/17

ಮಾನ್ಯರೆ,

ವಿಷಯ :- ಚಿಕ್ಕಬಳ್ಳಾಪುರ ನಗರ ಯೋಜನಾ/ ಅಭಿವೃದ್ಧಿ ಪ್ರಾಧಿಕಾರದ 2012-16 ರ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ರವಾನಿಸುತ್ತಿರುವ ಬಗ್ಗೆ.

* * * * *

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 48(2) ರಂತೆ ಚಿಕ್ಕಬಳ್ಳಾಪುರ ನಗರ ಯೋಜನಾ/ಅಭಿವೃದ್ಧಿ ಪ್ರಾಧಿಕಾರದ 2012-16 ರ ಸಾಲುಗಳ ಲೆಕ್ಕ ಪರಿಶೋಧನೆ ಕೈಗೊಂಡು ಲೆಕ್ಕ ಪರಿಶೋಧನಾ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮಗೆ ರವಾನಿಸಿದೆ.

ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾದ ನ್ಯೂನತೆಗಳನ್ನು ಲೆಕ್ಕ ಪರಿಶೋಧನಾ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ ಹಾಗೂ ಪ್ರಾಧಿಕಾರವು ಸ್ವಂತ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ನಿಟ್ಟಿನಲ್ಲಿ ಹಲವು ಸಲಹೆ ಹಾಗೂ ಸೂಚನೆಗಳನ್ನು ನೀಡಲಾಗಿದೆ. ಪ್ರಾಧಿಕಾರದ ಆಡಳಿತ ಸದರಿ ವರ್ಗದ ನ್ಯೂನತೆಗಳನ್ನು ಸರಿಪಡಿಸಲು ಕ್ರಮ ಕೈಗೊಂಡು ಅದರ ಬಗ್ಗೆ ಅನುಸರಣಾ ವರದಿಯನ್ನು ಕಾಯ್ದೆಯ ಕಲಂ 48(6) ರಂತೆ ಸಕ್ಷಮ ಪ್ರಾಧಿಕಾರದ ಮುಖೇನ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಕಛೇರಿಗೆ ಕಳುಹಿಸಲು ಕೋರಿದೆ.

ಲೆಕ್ಕ ಪರಿಶೋಧನಾ ವರದಿ ತಲುಪಿದ ಬಗ್ಗೆ ಸ್ವೀಕೃತಿ ಕೋರಿದೆ.

Received today at 11:30 AM
22/5/17

ತಮ್ಮ ವಿಶ್ವಾಸಿ,

ಹಿರಿಯ ಉಪ ನಿರ್ದೇಶಕರು,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ಚಿಕ್ಕಬಳ್ಳಾಪುರ.

ಪ್ರತಿಯನ್ನು :

1. ನಿರ್ದೇಶಕರು, ನಗರ ಯೋಜನಾ ಪ್ರಾಧಿಕಾರ, ಎಮ್.ಎಸ್. ಬಿಲ್ಡಿಂಗ್ ಕೆ.ಆರ್.ವೃತ್ತಿ ಬೆಂಗಳೂರು-01
   ಇವರ ಅವಗಾಹನೆಗೆ ಸಲ್ಲಿಸಲಾಗಿದೆ.
2. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, 4ನೇ ಮಹಡಿ, 'ಎ' ಬ್ಲಾಕ್, ಟಿ.ಟಿಎಂ.ಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027.
3. ಕಛೇರಿ ಪ್ರತಿ

Scanned with OKEN Scanner

ಚಿಕ್ಕಬಳ್ಳಾಪುರ ನಗರ ಯೋಜನಾ ಪ್ರಾಧಿಕಾರ/ ನಗರಾಭಿವೃದ್ಧಿ ಪ್ರಾಧಿಕಾರ ಸಂಸ್ಥೆಯ 2012–16ನೇ ಸಾಲಿನ
ಲೆಕ್ಕ ಪರಿಶೋಧನಾ ವರದಿಯಲ್ಲಿ ಪ್ರಸ್ತಾಪಿಸಿರುವ ಪ್ರಮುಖವಾದ ನ್ಯೂನತೆಗಳು ಹಾಗೂ
ಆಕ್ಷೇಪಣೆಯಲ್ಲಿಡಲಾದ ಮತ್ತು ವಸೂಲಾತಿಗೆ ಸೂಚಿಸಿದ ಮೊತ್ತಗಳ ವಿವರ

ಕ್ರ.ಸಂ	ಪ್ರಮುಖವಾದ ನ್ಯೂನತೆಗಳು	ಆಕ್ಷೇಪಣೆ ಮೊತ್ತ	ವಸೂಲಾತಿ ಮೊತ್ತ
6	ರಸೀದಿ ದಾಸ್ತಾನು ನಿರ್ವಹಿಸದಿರುವುದು	–	–
7	ಖಾಸಗಿ ಮುದ್ರಣಾಲಯದಿಂದ ಮುದ್ರಿಸಿರುವ ರಸೀದಿ ಪುಸ್ತಕಗಳನ್ನು ಉಪಯೋಗಿಸುತ್ತಿರುವುದು	–	–
8	ರಸೀದಿ ಪುಸ್ತಕಗಳಲ್ಲಿನ ನ್ಯೂನತೆಗಳು	–	–
10	ಆಯವ್ಯಯವನ್ನು ವಿಳಂಬವಾಗಿ ಅನುಮೋದಿಸಿರುವುದು	–	–
11	ವಾರ್ಷಿಕ ಲೆಕ್ಕ ಪತ್ರಗಳನ್ನು ವಿಳಂಬವಾಗಿ ಸಲ್ಲಿಸಿರುವುದು	–	–
17	ಉತ್ತಮತೆ ಶುಲ್ಕದ ದರಗಳನ್ನು ಪರಿಷ್ಕರಿಸದಿರುವುದರಿಂದ ಪ್ರಾಧಿಕಾರಕ್ಕೆ ಆದಾಯ ತಪ್ಪಿ ನಷ್ಟವಾಗಿರುವುದು	671030710	–
18	ಅಭಿವೃದ್ಧಿಯ ನಂತರ ಮಾರುಕಟ್ಟೆ ಮೌಲ್ಯವನ್ನು ಉಪ ನೋಂದಣಾಧಿಕಾರಿಯವರು ಅವೈಜ್ಞಾನಿಕವಾಗಿ ನಿಗದಿಪಡಿಸಿರುವುದು.	–	–
19	ಕೆರೆ ಅಭಿವೃದ್ಧಿ ಶುಲ್ಕ ವಸೂಲಿಸದಿರುವುದು.	–	3676250
20	ಖಾಸಗಿ ಬಡಾವಣೆಗಳನ್ನು ರಚಿಸುವ ಸಂದರ್ಭದಲ್ಲಿ ಮೇಲ್ವಿಚಾರಣೆ ಶುಲ್ಕ ವಸೂಲಿ ಮಾಡದಿರುವುದು	–	30681959
21	ಭೂ ಬದಲಾವಣೆ ಶುಲ್ಕ ವಸೂಲಿಗೆ ಸಂಬಂಧಿಸಿದ ಕಡತಗಳನ್ನು ಹಾಜರುಪಡಿಸಿಲ್ಲ	38394	–
22	ನಗರ ಯೋಜನಾ ಮಂಡಳಿಗೆ ವಂತಿಕೆ ಪಾವತಿಸದಿರುವುದು	311912	–
23(ಎ)	ಸಕಾಲದಲಿ ಹೂಡಿಕೆಗಳನ್ನು ನವೀಕರಿಸದೆ ಆರ್ಥಿಕ ನಷ್ಟ ಯಂಟು ಮಾಡಿರುವುದು	–	577160
27	ಸರಕು ಮತ್ತು ಸೇವೆಗಳ ಖರೀದಿಗಳಲ್ಲಿ ಕಂಡು ಬಂದ ನ್ಯೂನತೆಗಳು	2087291	–
28	ಆದಾಯ ತೆರಿಗೆ ಕಡಿತಗೊಳಿಸದೆ ಬಿಲ್ ಪಾವತಿ ಮಾಡಿರುವುದು	–	99479
30	ಪ್ರಾಧಿಕಾರದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ಪಾವತಿ ತಃಖ್ತೆಯನ್ನು ಸರ್ಕಾರದ ಮಂಜೂರಾತಿಗೆ ಸಲ್ಲಿಸಿ ಅನುಮೋದನೆ ಪಡೆದಿಲ್ಲ	–	–
32	ಮಾಸ್ಟರ್ ಪ್ಲಾನ್ ತಯಾರಿಸುವ ಗುತ್ತಿಗೆದಾರರಿಂದ ಭದ್ರತಾ ಠೇವಣಿ ಪಡೆಯದಿರುವುದು	–	59250
33	ನಿಗದಿತ ಅವಧಿಯಲ್ಲಿ ಮಾಸ್ಟರ್ ಪ್ಲಾನ್ ತಯಾರಿಸದಿರುವುದು	–	–
	ಒಟ್ಟು	**673468307**	**35194098**

ಹಿರಿಯ ಉಪ ನಿರ್ದೇಶಕರು,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ಚಿಕ್ಕಬಳ್ಳಾಪುರ.

Scanned with OKEN Scanner

ಚಿಕ್ಕಬಳ್ಳಾಪುರ ನಗರ ಯೋಜನಾ ಪ್ರಾಧಿಕಾರ/ನಗರಾಭಿವೃದ್ಧಿ ಪ್ರಾಧಿಕಾರ ಸಂಸ್ಥೆಯ 2012–16ನೇ ಸಾಲುಗಳ ಲೆಕ್ಕಪರಿಶೋಧನಾ ವರದಿ

ಭಾಗ–I

1) ಪ್ರಸ್ತಾವನೆ :

ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯಿದೆ 1961 ರ ಸೆಕ್ಷನ್ 68 ಸಿ (2) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಾವಳಿಗಳು 1965 ರ ನಿಯಮ 23(1) ರಂತೆ ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಸೆಕ್ಷನ್ 48(2) ರಂತೆ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2012–16ನೇ ಸಾಲುಗಳ ಲೆಕ್ಕ ಪರಿಶೋಧನೆಯನ್ನು ಕೈಗೊಳ್ಳಲಾಗಿದೆ. ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾದ ಪ್ರಮುಖವಾದ ನ್ಯೂನತೆಗಳನ್ನು ಹಾಗೂ ಲೋಪದೋಷಗಳನ್ನು ಮುಂದಿನ ಕಂಡಿಕೆಗಳಲ್ಲಿ ಪ್ರಸ್ತಾಪಿಸಲಾಗಿದೆ. ಪ್ರಾಧಿಕಾರದ ಆಡಳಿತ ವರ್ಗ ಸದರಿ ನ್ಯೂನತೆಗಳನ್ನು ಸರಿಪಡಿಸಲು ಕ್ರಮ ಕೈಗೊಂಡು ಅದರ ಅನುಸರಣಾ ವರದಿಯನ್ನು ಸೆಕ್ಷನ್ 48(6) ರಂತೆ ಕಳುಹಿಸಲು ಸೂಚಿಸಿದೆ.

2) ಲೆಕ್ಕ ಪರಿಶೋಧನೆ ಕೈಗೊಂಡ ಬಗ್ಗೆ ವಿವರಗಳು :

ಲೆಕ್ಕ ಪರಿಶೋಧನಾ ತಂಡದ ವಿವರ	ಶ್ರೀ.ಸಿ.ಕೃಷ್ಣಪ್ಪ, ಲೆಕ್ಕಪರಿಶೋಧನಾಧಿಕಾರಿ ಶ್ರೀ.ಎನ್.ಸುಧಾಕರ್, ಲೆಕ್ಕ ಅಧೀಕ್ಷಕರು ಶ್ರೀ.ಎ.ಶ್ರೀಧರ, ಲೆಕ್ಕಪರಿಶೋಧಕರು ಶ್ರೀ.ಎಸ್.ಜಗದೀಶ್ ರಾವ್, ಲೆಕ್ಕ ಪರಿಶೋಧಕರು
ಲೆಕ್ಕ ಪರಿಶೋಧನೆ ಪ್ರಾರಂಭಿಸಿದ ದಿನಾಂಕ	13–02–2017
ಲೆಕ್ಕ ಪರಿಶೋಧನೆ ಮುಕ್ತಾಯದ ದಿನಾಂಕ	22–02–2017
ಲೆಕ್ಕ ಪರಿಶೋಧನೆ ಬಳಸಿಕೊಂಡ ಮಾನವ ದಿನಗಳು	36 ಏಕ ಮಾನವ ದಿನಗಳು
ಕರಡು ತನಿಖಾ ವರದಿಯ ಪುನರ್ ಪರಿಶೀಲನಾಧಿಕಾರಿ ಹೆಸರು	ಶ್ರೀ.ಎನ್.ಬಿ.ಶಿವರುದ್ರಪ್ಪ ಅಪರ ನಿರ್ದೇಶಕರು,
ಪುನರ್ ಪರಿಶೀಲನಾ ದಿನಾಂಕ	13–3–2017

3) ಸಂಸ್ಥೆಯ ಆಡಳಿತ ವರ್ಗದ ವಿವರ :

ಅಧ್ಯಕ್ಷರು	ಶ್ರೀ.ನಾರಾಯಣಪ್ಪ	23.04.2012	26.05.2013
	ಶ್ರೀಮತಿ.ಕೆ.ಟಿ.ಶಾಂತಲಾ, ಉಪ ವಿಭಾಗಾಧಿಕಾರಿಗಳು	27.05.2013	07.08.2014
	ಶ್ರೀ.ಹೆಚ್.ಅಮರೇಶ್, ಉಪ ವಿಭಾಗಾಧಿಕಾರಿಗಳು	07.08.2014	25.03.2015
	ಶ್ರೀ.ಎಸ್.ಎಂ.ಮುನಿಯಪ್ಪ	26.03.2015	31.03.2016
ಸದಸ್ಯ ಕಾರ್ಯದರ್ಶಿಗಳು	ಶ್ರೀ.ಎಂ.ಎ.ಶ್ರೀನಾಥ್ (ಅ.ಪ್ರ)	23.04.2012	01.01.2013
	ಶ್ರೀ.ಡಿ.ಎಲ್.ಮಂಜುನಾಥ (ಅ.ಪ್ರ)	01.01.2013	10.01.2013
	ಶ್ರೀ.ರಘುನಾಥರೆಡ್ಡಿ (ಅ.ಪ್ರ)	10.01.2013	01.09.2013
	ಶ್ರೀ.ಸುರೇಶ.ಜೆ	02.09.2013	29.04.2015
ಆಯುಕ್ತರು	ಶ್ರೀ.ವಿ.ಮುನಿಶಾಮಪ್ಪ (ಅ.ಪ್ರ)	12.06.2015	30.07.2015
	ಶ್ರೀ.ಟಿ.ಆರ್.ಗಂಗಾಧರಸ್ವಾಮಿ	30.07.2015	31.03.2016
ನಗರ ಯೋಜಕ ಸದಸ್ಯರು	ಶ್ರೀ.ಸುರೇಶ.ಜೆ	30.04.2015	31.03.2016
ವಿಷಯ ನಿರ್ವಾಹಕರು	ಶ್ರೀ.ಅನಿಲ್ (ಹೊರಗುತ್ತಿಗೆ ಆಧಾರ)	01.06.2014	31.03.2016

4) ಪ್ರಾಧಿಕಾರದ ರಚನೆ ಬಗ್ಗೆ :

ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ:ನಅಇ 155 ಬೆಂರೂಪ್ರಾ 2011, ದಿನಾಂಕ:13.122011 ರಲ್ಲಿ ಚಿಕ್ಕ ಬಳ್ಳಾಪುರ ನಗರ ಯೋಜನಾ ಪ್ರಾಧಿಕಾರವನ್ನು ರಚಿಸಿ, ಆನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿಡಿ 336 ಬೆಂರೂಪ್ರಾ 2014, ದಿನಾಂಕ:9.02.2015 ರಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರಂತೆ ನಗರಾಭಿವೃದ್ಧಿ ಪ್ರಾಧಿಕಾರವನ್ನಾಗಿ ಘೋಷಿಸಿರುತ್ತದೆ.

Scanned with OKEN Scanner

ಪ್ರಸಕ್ತ ಲೆಕ್ಕ ಪರಿಶೋಧನೆ

5) ಪ್ರಸಕ್ತ ಲೆಕ್ಕ ಪರಿಶೋಧನೆ :

(1) ನಗದು ಶಿಲ್ಕು ಭೌತಿಕ ಪರಿಶೀಲನೆ :

ದಿನಾಂಕ:13/02/2017 ರಂದು ಕೈ ನಗದು ಶಿಲ್ಕನ್ನು ಭೌತಿಕವಾಗಿ ಪರಿಶೀಲಿಸಲಾಗಿ " ಯಾವುದೇ ಶಿಲ್ಕು" ಇರುವುದಿಲ್ಲ. ಕಛೇರಿ ನಗದು ಪುಸ್ತಕಕ್ಕೆ ತಾಳೆ ಇರುತ್ತದೆ.

(2) ಅಂಚೆ ಚೀಟಿಗಳ ಭೌತಿಕ ಪರಿಶೀಲನೆ :

ದಿನಾಂಕ:13/022017 ರಂದು ಅಂಚೆ ಚೀಟಿಗಳ ದಾಸ್ತಾನನ್ನು ಭೌತಿಕವಾಗಿ ಪರಿಶೀಲಿಸಲಾಗಿ ರೂ.835 ಮೌಲ್ಯದ ಅಂಚೆ ಚೀಟಿಗಳನ್ನು ದಾಸ್ತಾನು ವಹಿಗೆ ತಾಳೆ ಇರುತ್ತದೆ.

(3) ಉಪಯೋಗಿಸದ ರಶೀದಿ ಪುಸ್ತಕಗಳ ಭೌತಿಕ ಪರಿಶೀಲನೆ :

ದಿನಾಂಕ:13/02/2017 ರಂದು ಉಪಯೋಗಿಸಿದ ರಶೀದಿ ಪುಸ್ತಕಗಳು ಈ ಕೆಳಕಂಡಂತಿದ್ದು ದಾಸ್ತಾನು ಹಾಗೂ ವಿತರಣೆ ವಹಿಗೆ ತಾಳೆ ಇರುತ್ತದೆ.

ನಗರ ಯೋಜನಾ ಪ್ರಾಧಿಕಾರದ ರಶೀದಿ ಪುಸ್ತಕಗಳ ತೆರಿಗೆ/ಶುಲ್ಕ ವಸೂಲಿ ಒಟ್ಟು 36, ಸಂಖ್ಯೆ 25 ರಿಂದ 60 ರವರೆಗೆ ರಸೀದಿ ಪುಟ ಸಂಖ್ಯೆ:1201 ರಿಂದ 3000

ನಗರಾಭಿವೃದ್ಧಿ ಪ್ರಾಧಿಕಾರದ ಒಟ್ಟು 45 ರಸೀದಿ ಸಂಖ್ಯೆ:351 ರಿಂದ 2600

(4) ಹೂಡಿಕೆಗಳು : ರೂ.7,03,00,000

6) ರಸೀದಿ ಪುಸ್ತಕಗಳ ದಾಸ್ತಾನು ವಿವರ :

2012-16 ನೇ ಸಾಲಿನ ಪ್ರಾಧಿಕಾರದ ರಸೀದಿ ಪುಸ್ತಕಗಳ ದಾಸ್ತಾನು ವಿವರ ಪರಿಶೀಲಿಸಲಾಯಿತು. ರಸೀದಿ ಪುಸ್ತಕಗಳ ದಾಸ್ತಾನು ವಹಿಯನ್ನು ನಿರ್ವಹಿಸಿರುವುದಿಲ್ಲ. ವಹಿಯನ್ನು ನಿರ್ವಹಿಸಿ, ರಸೀದಿ ಪುಸ್ತಕಗಳ ಸ್ವೀಕೃತಿ, ವಿತರಣೆಯನ್ನು ದಾಖಲಿಸುವಂತೆ ಪದದಿ ಸೂಚಿಸಿದೆ. ಪ್ರಸ್ತಕ ಸಾಲಿನಲ್ಲಿ ಕಂಡು ಬಂದ ರಸೀದಿ ಪುಸ್ತಕಗಳ ಸ್ವೀಕೃತಿ ವಿತರಣೆ ಹಾಗೂ ಅಂತಿಮ ಶಿಲ್ಕಿನ ವಿವರಗಳು ಕೆಳಕಂಡಂತೆ ಇವೆ.

23-04-2012 ಕ್ಕೆ ಪ್ರಾರಂಭಿಕ ಶಿಲ್ಕು	ಇಲ್ಲ
2012-16 ರ ಸಾಲಿನ ಖರೀದಿ	112
ಒಟ್ಟು ಪುಸ್ತಕಗಳು	112
2012-16 ರ ಸಾಲಿನ ವಿತರಣೆಗಳು	27
31-03-2016 ಕ್ಕೆ ಅಂತಿಮ ಶಿಲ್ಕು	85

31-03-2016 ಕ್ಕೆ ಅಂತಿಮ ಶಿಲ್ಕಿನ ವಿವರ ರಸೀದಿ ಪುಸ್ತಕ ಸಂಖ್ಯೆ:25 ರಿಂದ 60 ಹಾಗೂ 8 ರಿಂದ 52

ಲೆಕ್ಕಪರಿಶೋಧನೆಯಲ್ಲಿ ಭಾಗಶ: ಪರಿಶೀಲಿಸಿದ ರಸೀದಿ ಪುಸ್ತಕಗಳು ಈ ಕೆಳಕಂಡಂತಿದೆ

ರಸೀದಿ ಪುಸ್ತಕ ಸಂಖ್ಯೆ	ಕೊನೆ ರಸೀದಿ/ದಿನಾಂಕ
24	1181/13-4-15
03	148/31-3-16

7) ಖಾಸಗಿ ಮುದ್ರಣಾಲಯದಿಂದ ಮುದ್ರಿಸಿರುವ ರಸೀದಿ ಪುಸ್ತಕಗಳನ್ನು ಉಪಯೋಗಿಸುತ್ತಿರುವ ಬಗ್ಗೆ :

ನಕ್ಷೆ ಮಂಜೂರಾತಿಗೆ ಸಂಬಂಧಪಟ್ಟಂತೆ ಭೂ ಪರಿವರ್ತನೆ/ವಿನ್ಯಾಸ/ಬದಲಾವಣೆ ಹಾಗೂ ಇತರೆ ವಸೂಲಾತಿ ಮೊತ್ತಗಳನ್ನು ಪ್ರಾಧಿಕಾರದಲ್ಲಿ ರಸೀದಿಗಳ ಮೂಲಕ ವಸೂಲಿಸಲಾಗುತ್ತಿದ್ದು, ಸದರಿ ರಸೀದಿ ಪುಸ್ತಕಗಳನ್ನು ಸ್ಥಳೀಯ ಖಾಸಗಿ ಸಂಸ್ಥೆಗಳ ಮುದ್ರಣಾಲಯ ದಿಂದ ಮುದ್ರಿಸಿರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಗಿದೆ. ಈ ರೀತಿ ಖಾಸಗಿ ಮುದ್ರಣಾಲಯದಲ್ಲಿ ಮುದ್ರಿಸಿರುವ ರಸೀದಿ ಪುಸ್ತಕಗಳನ್ನು ಉಪಯೋಗಿಸಿಕೊಳ್ಳಲು ಅವಕಾಶವಿರುವುದಿಲ್ಲ. ಆದ್ದರಿಂದ ಸರ್ಕಾರಿ ಮುದ್ರಣಾಲಯದಿಂದ ಮುದ್ರಿಸಿರುವ ಮೂಲ ಹಾಗೂ ದ್ವಿ ಪ್ರತಿಗಳಿರುವ ಕಾರ್ಬನ್ ಇಂಪ್ರೆಶನ್ ಬೀಳುವ ರಸೀದಿ ಪುಸ್ತಕಗಳನ್ನು ಉಪಯೋಗಿಸುವುದು ನಿಯಮವಾಗಿರುತ್ತದೆ. ಮುಂದಿನ ಅವಧಿಯಲ್ಲಿ ಈ ಬಗ್ಗೆ ಆಡಳಿತ ಮಂಡಳಿಯವರು ಕ್ರಮ ಕೈಗೊಂಡು ನಿರ್ವಹಿಸಲು ಲೆಕ್ಕ ಪರಿಶೋಧನೆಯು ಸೂಚಿಸುತ್ತದೆ. ಖಾಸಗಿ ಮುದ್ರಣಾಲಯದ ಮುದ್ರಿಸಿರುವ ಪುಸ್ತಕಗಳನ್ನು ಉಪಯೋಗಿಸಲಾಗಿರುವುದರಲ್ಲಿ ಏನಾದರೂ ಲೋಪದೋಷಗಳು ಕಂಡು ಬಂದಲ್ಲಿ ಸಂಬಂಧಿಸಿದ ಆಯುಕ್ತರೇ ಜವಾಬ್ದಾರರಾಗಿರುತ್ತಾರೆ.

Scanned with OKEN Scanner

8) ರಸೀದಿ ಪುಸ್ತಕಗಳಲ್ಲಿನ ನ್ಯೂನತೆಗಳು :

• 2012–16 ನೇ ಸಾಲಿನ ಲೆಕ್ಕ ತಪಾಸಣೆ ಸಮಯದಲ್ಲಿ ಪರಿಶೀಲಿಸಲಾದ ರಸೀದಿ ಪುಸ್ತಕಗಳಲ್ಲಿ ಕಂಡು ಬಂದ ನ್ಯೂನತೆಗಳು ಈ ರೀತಿ ಇವೆ.

1. ರಸೀದಿ ಪುಸ್ತಕವು ಒಳಗೊಂಡಿರುವ ಒಟ್ಟು ರಸೀದಿಗಳ ಸಂಖ್ಯೆ ಹಾಗೂ ವಿತರಿಸಿದ ದಿನಾಂಕ ಬಗ್ಗೆ ದೃಢೀಕರಣ ಇರುವುದಿಲ್ಲ. ಘೋಷ್ವಾರೆ ಹಾಕಿ ದೃಢೀಕರಿಸಿರುವುದು.
2. ರಸೀದಿ ಪುಸ್ತಕಗಳು ಕಛೇರಿ/ಸಂಸ್ಥೆಯ ಆದಾಯ ಸ್ವೀಕೃತಿಗಳಿಗೆ ಸಂಬಂಧಿಸಿದ ಪ್ರಮುಖ ದಾಖಲಾತಿಯಾಗಿರುವುದರಿಂದ ಅವುಗಳನ್ನು ನಿಗದಿತ ನಮೂನೆಯಲ್ಲಿ ಕ್ರಮಬದ್ಧವಾಗಿ ಮುದ್ರಿಸಿಕೊಂಡು, ಕ್ರಮ ಸಂಖ್ಯೆವಾರು ನಿರ್ವಹಿಸಿಕೊಂಡು ಸರಪಡಿಸಿಕೊಳ್ಳುವುದು ಅಗತ್ಯವಾಗಿರುತ್ತದೆ.

9) <u>ಬಡಾವಣೆ ನಕ್ಷೆ, ಕಟ್ಟಡ ನಕ್ಷೆ ಮತ್ತು ಭೂ ಉಪಯೋಗ ಅರ್ಜಿ ಫಾರಂಗಳ ದಾಸ್ತಾನು</u> :

ಪ್ರಾಧಿಕಾರವು ವಿನ್ಯಾಸ ಅನುಮೋದನೆಗಾಗಿ 4 ಪುಟಗಳ ಅರ್ಜಿ ನಮೂನೆಯನ್ನು ತಯಾರಿಸಿದ್ದು, ಪ್ರತಿ ಅರ್ಜಿಗೆ ರೂ.100 ರಂತೆ ವಸೂಲಿಸಲು ತೀರ್ಮಾನಿಸಿದ್ದು, ಅರ್ಜಿಯನ್ನು ಜೆರಾಕ್ಸ್ ಮಾಡಿ ತದ ನಂತರ ಸದರಿ ಅರ್ಜಿಗೆ ಸಂಖ್ಯೆ ನೀಡಿ ವಿತರಿಸುವ ಪದ್ಧತಿಯನ್ನು ರೂಢಿಸಿಕೊಂಡಿರುವುದು ಕಂಡು ಬಂದಿರುತ್ತದೆ. ರೂ.100 ಶುಲ್ಕ ವಸೂಲಿ ಮಾಡಿ ಜಮಾ ಮಾಡುತ್ತಿರುತ್ತಾರೆ. ಆದರೆ ಬಡಾವಣೆ ನಕ್ಷೆ, ಕಟ್ಟಡ ನಕ್ಷೆ, ಭೂ ಬದಲಾವಣೆ ಅರ್ಜಿ ನಮೂನೆಯವನ್ನು ವಿತರಿಸಿ ರುವುದಿಲ್ಲ. ಅರ್ಜಿಗಳನ್ನು ಜೆರಾಕ್ಸ್ ಮಾಡಿ ರೂ.100 ಪ್ರತಿ ಅರ್ಜಿಗೆ ವಸೂಲಿ ಮಾಡುವುದಾಗಿ ತಿಳಿಸಿರುತ್ತಾರೆ. ಇನ್ನು ಮುಂದೆ ಅರ್ಜಿ ಫಾರಂಗಳನ್ನು ಪ್ರತ್ಯೇಕವಾಗಿ ಪ್ರಿಂಟ್ ಮಾಡಿ ದಾಸ್ತಾನಿಗೆ ತೆಗೆದುಕೊಂಡು ವಿತರಿಸುವಂತೆ ವರದಿ ಸೂಚಿಸಿದೆ

10) <u>ಆಯವ್ಯಯವನ್ನು ವಿಳಂಬವಾಗಿ ಅನುಮೋದಿಸಿರುವುದು</u> :

ನಗರ ಯೋಜನಾ ಪ್ರಾಧಿಕಾರದ 2012–15 ರ ಸಾಲಿನ ಆಯವ್ಯಯವನ್ನು ತಯಾರಿಸಿ ಅನುಮೋದನೆ ಪಡೆದಿರುವಬಗ್ಗೆ ವಿವರಗಳು ಲೆಕ್ಕ ಪರಿಶೋಧನೆಗೆ ಲಭ್ಯವಾಗಿರುವುದಿಲ್ಲ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರಸೆಕ್ಷನ್ 43 ರಂತೆ ನಗರಾಭಿವೃದ್ಧಿ ಪ್ರಾಧಿಕಾರಗಳು ಪ್ರತಿ ವರ್ಷ ಫೆಬ್ರವರಿ 1 ರ ಒಳಗೆ ವಿಶೇಷ ಸಭೆ ಕರೆದು ಮುಂಬರುವ ಆರ್ಥಿಕ ವರ್ಷದ ಆಯವ್ಯಯವನ್ನು ಮಂಡಿಸಿ ಸೆಕ್ಷನ್ 45 ರಂತೆ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಸರ್ಕಾರವು ಆಯವ್ಯಯವನ್ನು ಪರಿಷ್ಕರಿಸುವ ಅಧಿಕಾರ ಹೊಂದಿರುತ್ತದೆ. ಸದರಿ ಪ್ರಾಧಿಕಾರವು 2015–16ರ ಆಯವ್ಯಯವನ್ನು ವಿಳಂಬವಾಗಿ ಅನುಮೋದಿಸಿದ್ದು ವಿವರಗಳು ಕೆಳಕಂಡಂತಿದೆ.

1–4–2015 ಕ್ಕೆ ಪ್ರಾರಂಭಿಕ ಶಿಲ್ಕು	–
2015–16 ರ ನಿರೀಕ್ಷಿತ ಜಮೆ	80727685
ಒಟ್ಟು:	80727685
2015–16 ರ ನಿರೀಕ್ಷಿತ ಖರ್ಚು	40030000
31–3–2016 ಕ್ಕೆ ಅಂತಿಮ ಶಿಲ್ಕು	40697685

ಆರ್ಥಿಕ ವರ್ಷ ಪ್ರಾರಂಭವಾದ ನಂತರ ಘಟನ್ನೋತ್ತರವಾಗಿ ಆಯವ್ಯಯವನ್ನು ಅನುಮೋದಿಸುವ ಕ್ರಮ ಶಾಸನಾತ್ಮಕ ನಿಬಂಧನೆಗಳ ಉಲ್ಲಂಘನೆಯಾಗುತ್ತದೆ. ಏಕೆಂದರೆ ಸದರಿ ಕಾಯ್ದೆಯ ಸೆಕ್ಷನ್ 47 ರಂತೆ ಆಯವ್ಯಯದಲ್ಲಿ ಅವಕಾಶ ಕಲ್ಪಿಸದೇ ಯಾವುದೇ ವೆಚ್ಚ ಭರಿಸುವಂತಿಲ್ಲ. ಇನ್ನು ಮುಂದೆ ಈ ರೀತಿಯ ನ್ಯೂನತೆ ಮರುಕಳಿಸದಂತೆ ಆಯುಕ್ತರು ವೈಯಕ್ತಿಕ ಗಮನ ಹರಿಸಿ ಕ್ರಮ ವಹಿಸುವುದು.

ಆಯವ್ಯಯದ ಅಂಕಿ ಅಂಶಗಳನ್ನು ಗಮನಿಸಿದಾಗ ಅದನ್ನು ವಾಸ್ತವಿಕ ಅಂಕಿ ಅಂಶಗಳ ಆಧಾರದ ಮೇಲೆ ತಯಾರಿಸಿಲ್ಲ. ಪ್ರಾಧಿಕಾರವು ಇನ್ನು ಮುಂದೆ ಆಯವ್ಯವನ್ನು ವಾಸ್ತವಿಕ ಅಂಕಿ ಅಂಶಗಳ ಆಧಾರದ ಮೇಲೆ ತಯಾರಿಸಿ ಶಾಸನಾತ್ಮಕ ನಿಭಂದನೆಗಳಂತೆ ಆರ್ಥಿಕ ವರ್ಷ ಪ್ರಾರಂಭಕ್ಕೆ ಅನುಮೋದನೆ ಸಭೆಯಲ್ಲಿ ಮಂಡಿಸಿ ಸರ್ಕಾರದಿಂದ ಅನುಮೋದನೆ ಪಡೆದುಕೊಳ್ಳುವುದು.

11) <u>ವಾರ್ಷಿಕ ಲೆಕ್ಕ ಪತ್ರಗಳನ್ನು ವಿಳಂಬವಾಗಿ ಸಲ್ಲಿಸಿರುವುದು</u> :

ಪ್ರಾಧಿಕಾರವು 2012–16 ರ ಸಾಲಿನ ವಾರ್ಷಿಕ ಹಾಗೂ ಮಾಸಿಕ ಲೆಕ್ಕ ಪತ್ರಗಳನ್ನು ಲೆಕ್ಕಪರಿಶೋಧನೆಗೆ ಪ್ರಾರಂಭಿಸಿದ ದಿನಾಂಕ ದಂದು ಲೆಕ್ಕ ಪರಿಶೋಧನಾ ತಂಡಕ್ಕೆ ಹಾಜರುಪಡಿಸಿರುತ್ತಾರೆ. ಅಂದರೆ ವಿಳಂಬವಾಗಿ ಸಲ್ಲಿಸಿರುತ್ತಾರೆ. ಈ ಕ್ರಮ ಸರಿಯಲ್ಲ ಇನ್ನು ಮುಂದೆ ಆರ್ಥಿಕ ವರ್ಷ ಮುಕ್ತಾಯಗೊಂಡ ಮೂರು ತಿಂಗಳ ಒಳಗಾಗಿ ಆಯಾ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿದ್ಧಪಡಿಸಿ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಹಾಗೂ ಸಕ್ಷಮ ಪ್ರಾಧಿಕಾರಗಳಿಗೆ ಕಳುಹಿಸುವುದು.

12) <u>ಆರ್ಥಿಕ ಪರಿಸ್ಥಿತಿ</u> :

ಚಿಕ್ಕಬಳ್ಳಾಪುರ ನಗರ ಯೋಜನಾ ಪ್ರಾಧಿಕಾರವು 2015–16 ರ ಅಂತ್ಯಕ್ಕೆ ಆರ್ಥಿಕ ವಹಿವಾಟನ್ನು ಎರಡು ಬ್ಯಾಂಕ್ ಖಾತೆಗಳಲ್ಲಿ ನಡೆಸುತ್ತಿದ್ದು ವಿವರಗಳು ಕೆಳಕಂಡಂತಿವೆ.

Scanned with OKEN Scanner

ಖಾತೆ ವಿವರ	ಬ್ಯಾಂಕ್ ವಿವರ	ಖಾತೆ ಸಂಖ್ಯೆ
ಕರೆ ಪುನಶ್ಚೇತನ ಶುಲ್ಕದ ಖಾತೆ	ಎಸ್.ಬಿ.ಎಮ್. ಎ.ಪಿ.ಎಂ.ಸಿ.ಯಾರ್ಡ್, ಚಿಕ್ಕಬಳ್ಳಾಪುರ	127601101000296
ಉತ್ತಮತೆ ಮತ್ತು ಇತರೆ ಶುಲ್ಕದ ಖಾತೆ	ವಿಜಯಾ ಬ್ಯಾಂಕ್, ಚಿಕ್ಕಬಳ್ಳಾಪುರ	64139750276

ಷರಾ: ಕೆರೆ ಪುನಃಶ್ಚೇತನ ಶುಲ್ಕವನ್ನು ದಿನಾಂಕ 08.04.2014 ರ ವರೆಗೆ ವಿಜಯಾ ಬ್ಯಾಂಕಿನ ಖಾತೆ ಸಂಖ್ಯೆ:127601101000296 ರಲ್ಲಿ ನಿರ್ವಹಿಸಿದ್ದು ದಿನಾಂಕ:09.04.2014 ರಿಂದ ಎಸ್.ಬಿ.ಎಮ್. ಬ್ಯಾಂಕಿನ ಖಾತೆ ಸಂಖ್ಯೆ:64139750276 ರಲ್ಲಿ ನಿರ್ವಹಿಸಲಾಗಿದೆ.

2012–13

(ಅ) ನಗದು ಪುಸ್ತಕದಂತೆ :

01.04.2012 ಕ್ಕೆ ಆರಂಭಿಕ ಶಿಲ್ಕು	–
2012–13 ರ ಸ್ವೀಕೃತಿಗಳು/ಜಮೆಗಳು	1,55,33,141
ಒಟ್ಟು	1,55,33,141
2012–13 ರ ಪಾವತಿಗಳು/ವೆಚ್ಚಗಳು	5,58,871
31.03.2013 ಕ್ಕೆ ಅಂತಿಮ ಶಿಲ್ಕು	1,49,74,270

(ಆ) ಬ್ಯಾಂಕ್ ಖಾತೆಗಳಂತೆ : (ಖಾತೆ ಸಂಖ್ಯೆ : 127601101000296)

01.04.2012 ಕ್ಕೆ ಆರಂಭಿಕ ಶಿಲ್ಕು	–
2012–13 ರ ಸ್ವೀಕೃತಿಗಳು/ಜಮೆಗಳು	1,84,49,519
ಒಟ್ಟು	1,84,49,519
2012–13 ರ ಪಾವತಿಗಳು/ವೆಚ್ಚಗಳು	5,59,871
31.03.2013 ಕ್ಕೆ ಅಂತಿಮ ಶಿಲ್ಕು	1,78,89,648

ಲೆಕ್ಕ ಸಮನ್ವಯ

(ಇ) ವ್ಯತ್ಯಾಸದ ವಿವರ :

31.03.2013 ಕ್ಕೆ ಅಂತಿಮ ಶಿಲ್ಕು ನಗದು ಪುಸ್ತಕದಂತೆ	1,49,74,270
ಬ್ಯಾಂಕ್ ಪಾಸ್ ಪುಸ್ತಕದಂತೆ ಅಂತಿಮ ಶಿಲ್ಕು	1,78,90,648
ವ್ಯತ್ಯಾಸ	29,16,378

(ಈ) ವ್ಯತ್ಯಾಸಕ್ಕೆ ಕಾರಣ :

ಜಮೆ ಬಾಕಿ		ಪಾವತಿ ಬಾಕಿ	ವ್ಯತ್ಯಾಸ
ನಗದು ಪುಸ್ತಕಕ್ಕೆ ಸ್ವೀಕೃತಗೊಂಡು ಬ್ಯಾಂಕಿಗೆ ಜಮೆಯಾಗದ ಚೆಕ್/ಡಿ.ಡಿಗಳ ಮೊತ್ತ	–	ನಗದು ಪುಸ್ತಕದಲ್ಲಿ ಪಾವತಿಯಾಗಿ ಬ್ಯಾಂಕಿನಲ್ಲಿ ನಗದಾಗದ ಚೆಕ್‌ಗಳ ಮೊತ್ತ	–
ವಸೂಲಾತಿ ಮೊತ್ತಕ್ಕಿಂತ ಹೆಚ್ಚಾಗಿ ಜಮೆಯಾದ ಮೊತ್ತ	29,16,378	ವಸೂಲಿಸಿದ ಮೊತ್ತದಲ್ಲಿ ಕಡಿಮೆ ಇರಸಾಲು ಮಾಡಿರುವ ಮೊತ್ತ	–
ಒಟ್ಟು	**29,16,378**	ಒಟ್ಟು	**29,16,378**

❖ **ಜಮೆ ಬಾಕಿ ವಿವರಗಳು :**

2012–13 ರಲ್ಲಿ ನಗದು ಪುಸ್ತಕದಲ್ಲಿ ಸ್ವೀಕೃತಗೊಂಡಿರುವ ಮೊತ್ತಕ್ಕಿಂತಲೂ ರೂ.29,16,378 ಗಳು ಬ್ಯಾಂಕ್ ಖಾತೆಗೆ ಹೆಚ್ಚುವರಿ ಜಮೆಯಾಗಿರುತ್ತವೆ. ಸಾಮಾನ್ಯವಾಗಿ ಶುಲ್ಕವನ್ನು ಡಿ.ಡಿ./ಚೆಕ್ ಗಳ ಮೂಲಕ ಸ್ವೀಕರಿಸಿದ್ದು, ಡಿ.ಡಿ./ಚೆಕ್ ಗಳು ನಗದಾದ ಕೂಡಲೇ ರಸೀದಿಗಳನ್ನು ನೀಡದೇ ಇರುವುದರಿಂದ ಹೆಚ್ಚುವರಿ ಜಮೆಯಾದಂತೆ ಕಂಡು ಬಂದಿರುತ್ತದೆ. ಇದಲ್ಲದೆ ಹಲವು ನಿವೇಶನ / ಬಡಾವಣೆ ಮಾಲೀಕರು ಶುಲ್ಕ ಪಾವತಿಸುವ ಸಂದರ್ಭದಲ್ಲಿ ಡಿ.ಡಿ. ಪಡೆಯುವ ಸಂದರ್ಭದಲ್ಲಿ ಶುಲ್ಕದ ಮೊತ್ತವನ್ನು ಮುಂದಿನ ನೂರು/ಸಾವಿರದ ಸಂಖ್ಯೆಯ ಮೊತ್ತಕ್ಕೆ ಪೂರ್ಣಗೊಳಿಸಿ (Round Off) ಡಿ.ಡಿ. ಪಡೆದಿರುವ ಕಾರಣ ವಸೂಲಿ ಮೊತ್ತಕ್ಕಿಂತ ಹೆಚ್ಚಿಗೆ ಜಮೆಯಾಗಿರುತ್ತದೆ.

Scanned with OKEN Scanner

(ಅ) ನಗದು ಪುಸ್ತಕದಂತೆ :

01.04.2013 ಕ್ಕೆ ಆರಂಭಿಕ ಶಿಲ್ಕು	1,49,74,270
2013–14 ರ ಸ್ವೀಕೃತಿಗಳು/ಜಮೆಗಳು	1,45,31,550
ಒಟ್ಟು	2,95,05,820
2013–14 ರ ಪಾವತಿಗಳು/ವೆಚ್ಚಗಳು	5,10,052
31.03.2014 ಕ್ಕೆ ಅಂತಿಮ ಶಿಲ್ಕು	2,89,95,768

(ಆ) ಬ್ಯಾಂಕ್ ಖಾತೆಗಳಂತೆ : (ಖಾತೆ ಸಂಖ್ಯೆ : **127601101000296**)

01.04.2012 ಕ್ಕೆ ಆರಂಭಿಕ ಶಿಲ್ಕು	1,78,90,648
2012–13 ರ ಸ್ವೀಕೃತಿಗಳು/ಜಮೆಗಳು	1,18,36,954
ಒಟ್ಟು	29727602
2012–13 ರ ಪಾವತಿಗಳು/ವೆಚ್ಚಗಳು	5,26,536
31.03.2013 ಕ್ಕೆ ಅಂತಿಮ ಶಿಲ್ಕು	2,92,01,066

ಲೆಕ್ಕ ಸಮನ್ವಯ :

(ಇ) ವ್ಯತ್ಯಾಸದ ವಿವರ :

ನಗದು ಪುಸ್ತಕದಂತೆ ಅಂತಿಮ ಶಿಲ್ಕು	2,89,95,768.00
ಬ್ಯಾಂಕ್ ಪಾಸ್ ಪುಸ್ತಕದಂತೆ ಅಂತಿಮ ಶಿಲ್ಕು	2,92,01,066
ವ್ಯತ್ಯಾಸ	2,05,298

(ಈ) ವ್ಯತ್ಯಾಸಕ್ಕೆ ಕಾರಣ :

ಜಮೆ ಬಾಕಿ		ಪಾವತಿ ಬಾಕಿ		ವ್ಯತ್ಯಾಸ
ನಗದು ಪುಸ್ತಕಕ್ಕೆ ಸ್ವೀಕೃತಗೊಂಡು ಬ್ಯಾಂಕಿಗೆ ಜಮೆಯಾಗದ ಚೆಕ್/ಡಿ.ಡಿಗಳ ಮೊತ್ತ	2,942	ನಗದು ಪುಸ್ತಕದಲ್ಲಿ ಪಾವತಿಯಾಗಿ ಬ್ಯಾಂಕಿನಲ್ಲಿ ನಗದಾಗದ ಚೆಕ್ ಗಳ ಮೊತ್ತ	570	–
ವಸೂಲಾತಿ ಮೊತ್ತದಲ್ಲಿ ಕಡಿಮೆ ಜಮೆಯಾದ ಮೊತ್ತ	–	2012–13 ರ ಸಾಲಿನಲ್ಲಿ ವಸೂಲಿಸಿದ ಮೊತ್ತಕ್ಕಿಂತ ಹೆಚ್ಚಾಗಿ ಜಮೆಯಾಗಿರುವ ಮೊತ್ತ	44,673	–
–	–	2013–14ರ ಸಾಲಿನಲ್ಲಿ ಹೆಚ್ಚಾಗಿ ಜಮೆಯಾಗಿರುವ ಮೊತ್ತ	1,62,997	–
ಒಟ್ಟು	**2,942**	**ಒಟ್ಟು**	**2,08,240**	**2,05,298**

➢ ನಗದಾಗದ ಚೆಕ್‌ಗಳ ವಿವರ :

ಚೆಕ್ ಸಂಖ್ಯೆ/ದಿನಾಂಕ	ಮೊತ್ತ
932744/03.07.13	ರೂ.570

➢ ಹೆಚ್ಚುವರಿ ಜಮೆಗೆ ವಿವರಣೆ :

2013–14 ರ ಅಂತ್ಯಕ್ಕೆ ನಗದು ಪುಸ್ತಕದಲ್ಲಿ ಸ್ವೀಕೃತಗೊಂಡಿರುವ ಮೊತ್ತಕ್ಕಿಂತಲೂ ರೂ.207670 ಗಳು ಬ್ಯಾಂಕ್ ಖಾತೆಗೆ ಹೆಚ್ಚುವರಿ ಜಮೆಯಾಗಿರುತ್ತವೆ. ಸಾಮಾನ್ಯವಾಗಿ ಶುಲ್ಕವನ್ನು ಡಿ.ಡಿ./ಚೆಕ್ ಗಳ ಮೂಲಕ ಸ್ವೀಕರಿಸಿದ್ದು, ಡಿ.ಡಿ./ಚೆಕ್‌ಗಳು ನಗದಾದ ಕೂಡಲೇ ರಸೀದಿಗಳನ್ನು ನೀಡದೇ ಇರುವುದರಿಂದ ಹೆಚ್ಚುವರಿ ಜಮೆಯಾದಂತೆ ಕಂಡು ಬಂದಿರುತ್ತದೆ. ಇದಲ್ಲದೆ ಹಲವು ನಿವೇಶನ / ಬಡಾವಣೆ ಮಾಲೀಕರು ಶುಲ್ಕ ಪಾವತಿಸುವ ಸಂದರ್ಭದಲ್ಲಿ ಡಿ.ಡಿ. ಪಡೆಯುವ ಸಂದರ್ಭದಲ್ಲಿ ಶುಲ್ಕದ ಮೊತ್ತವನ್ನು ಮುಂದಿನ ನೂರು/ಸಾವಿರದ ಸಂಖ್ಯೆಯ ಮೊತ್ತಕ್ಕೆ ಪೂರ್ಣಗೊಳಿಸಿ (Round Off) ಡಿ.ಡಿ. ಪಡೆದಿರುವ ಕಾರಣ ವಸೂಲಿ ಮೊತ್ತಕ್ಕಿಂತ ಹೆಚ್ಚಿಗೆ ಜಮೆಯಾಗಿರುತ್ತದೆ.

Scanned with OKEN Scanner

(ಅ) ನಗದು ಪುಸ್ತಕದಂತೆ :

01.04.2014 ಕ್ಕೆ ಆರಂಭಿಕ ಶಿಲ್ಕು	2,89,95,768
2014–15 ರ ಸ್ವೀಕೃತಿಗಳು/ಜಮೆಗಳು	2,25,71,888
ಒಟ್ಟು	5,15,67,656
2014–15 ರ ಪಾವತಿಗಳು/ವೆಚ್ಚಗಳು	1,26,45,421
31.03.2015 ಕ್ಕೆ ಅಂತಿಮ ಶಿಲ್ಕು	3,89,22,235

(ಆ) ಬ್ಯಾಂಕ್ ಖಾತೆಗಳಂತೆ :

ವಿವರ	ಖಾತೆ ಸಂಖ್ಯೆ : 127601101000296	ಖಾತೆ ಸಂಖ್ಯೆ: 64139750276	ಒಟ್ಟು
01.04.2012 ಕ್ಕೆ ಆರಂಭಿಕ ಶಿಲ್ಕು	2,92,01,066	–	2,92,01,066
2012–13 ರ ಸ್ವೀಕೃತಿಗಳು/ಜಮೆಗಳು	63,72,151	1,59,86,385	2,23,58,536
ಒಟ್ಟು	3,55,73,217	1,59,86,385	5,15,59,602
2012–13 ರ ಪಾವತಿಗಳು/ವೆಚ್ಚಗಳು	1,25,81,616	725	1,25,82,341
31.03.2013 ಕ್ಕೆ ಅಂತಿಮ ಶಿಲ್ಕು	2,29,91,601	1,59,85,660	3,89,77,261

ಲೆಕ್ಕ ಸಮನ್ವಯ :

(ಇ) ವ್ಯತ್ಯಾಸದ ವಿವರ :

ನಗದು ಪುಸ್ತಕದಂತೆ ಅಂತಿಮ ಶಿಲ್ಕು	3,89,22,235
ಬ್ಯಾಂಕ್ ಪಾಸ್ ಪುಸ್ತಕದಂತೆ ಅಂತಿಮ ಶಿಲ್ಕು	3,89,77,261
ವ್ಯತ್ಯಾಸ	55,026

(ಈ) ವ್ಯತ್ಯಾಸಕ್ಕೆ ಕಾರಣ :

ಜಮೆ ಬಾಕಿ		ಪಾವತಿ ಬಾಕಿ		ವ್ಯತ್ಯಾಸ
ನಗದು ಪುಸ್ತಕಕ್ಕೆ ಸ್ವೀಕೃತಗೊಂಡು ಬ್ಯಾಂಕಿಗೆ ಜಮೆಯಾಗದ ಚೆಕ್/ಡಿ.ಡಿಗಳ ಮೊತ್ತ	8,654	ನಗದು ಪುಸ್ತಕದಲ್ಲಿ ಪಾವತಿಯಾಗಿ ಬ್ಯಾಂಕಿನಲ್ಲಿ ನಗದಾಗದ ಚೆಕ್ ಗಳ ಮೊತ್ತ	63,080	–
ವಸೂಲಾತಿ ಮೊತ್ತದಲ್ಲಿ ಕಡಿಮೆ ಜಮೆಯಾದ ಮೊತ್ತ	–	2014–15 ರಲ್ಲಿ ಹೆಚ್ಚಾಗಿ ಇರಿಸಾಲು ಮಾಡಿರುವ ಮೊತ್ತ	600	–
ಒಟ್ಟು	**8,654**	ಒಟ್ಟು	**63,680**	**55,026**

➢ <u>ನಗದಾಗದ ಚೆಕ್‌ಗಳ ವಿವರ :</u>

ಚೆಕ್ ಸಂಖ್ಯೆ/ದಿನಾಂಕ	ಮೊತ್ತ
25559738	4,080
25559747	59,000
ಒಟ್ಟು	63,068

➢ ಹೆಚ್ಚುವರಿ ಜಮೆಗೆ ವಿವರಣೆ :

2014–15 ರ ಅಂತ್ಯಕ್ಕೆ ನಗದು ಪುಸ್ತಕದಲ್ಲಿ ಸ್ವೀಕೃತಗೊಂಡಿರುವ ಮೊತ್ತಕ್ಕಿಂತಲೂ ರೂ.44,399 ಗಳು ಬ್ಯಾಂಕ್ ಖಾತೆಗೆ ಹೆಚ್ಚುವರಿ ಜಮೆಯಾಗಿರುತ್ತವೆ. ಆದರೆ 2013–14ರ ಅಂತ್ಯಕ್ಕೆ ಲೆಕ್ಕ ಸಮನ್ವಯಗೊಳಿಸಿ ರೂ.43,799 ಗಳನ್ನು ನಗದು ಪುಸ್ತಕಕ್ಕೆ ಸ್ವೀಕೃತಿ ನಮೂದಿಸಿರುವ ಕಾರಣ ಉಳಿದ ರೂ.600/– ಗಳು ಮಾತ್ರ ಹೆಚ್ಚುವರಿ ಕಂಡು ಬಂದಿರುತ್ತವೆ. ಸಾಮಾನ್ಯವಾಗಿ ಶುಲ್ಕವನ್ನು ಡಿ.ಡಿ./ಚೆಕ್ ಗಳ ಮೂಲಕ ಸ್ವೀಕರಿಸಿದ್ದು, ಡಿ.ಡಿ./ಚೆಕ್ ಗಳು ನಗದಾದ ಕೂಡಲೇ ರಸೀದಿಗಳನ್ನು ನೀಡದೇ ಇರುವುದರಿಂದ ಹೆಚ್ಚುವರಿ ಜಮೆಯಾದಂತೆ ಕಂಡು ಬಂದಿರುತ್ತದೆ. ಇದಲ್ಲದೆ ಹಲವು ನಿವೇಶನ / ಬಡಾವಣೆ ಮಾಲೀಕರು ಶುಲ್ಕ ಪಾವತಿಸುವ ಸಂದರ್ಭದಲ್ಲಿ ಡಿ.ಡಿ. ಪಡೆಯುವ ಸಂದರ್ಭದಲ್ಲಿ ಶುಲ್ಕದ ಮೊತ್ತವನ್ನು ಮುಂದಿನ ನೂರು/ಸಾವಿರದ ಸಂಖ್ಯೆಯ ಮೊತ್ತಕ್ಕೆ ಪೂರ್ಣಗೊಳಿಸಿ (Round Off) ಡಿ.ಡಿ. ಪಡೆದಿರುವ ಕಾರಣ ವಸೂಲಿ ಮೊತ್ತಕ್ಕಿಂತ ಹೆಚ್ಚಿಗೆ ಜಮೆಯಾಗಿರುತ್ತದೆ.

Scanned with OKEN Scanner

(ಅ) ನಗದು ಪುಸ್ತಕದಂತೆ :

01.04.2015 ಕ್ಕೆ ಆರಂಭಿಕ ಶಿಲ್ಕು	3,89,22,235
2015-16 ರ ಸ್ವೀಕೃತಿಗಳು/ಜಮೆಗಳು	94,46,105
ಒಟ್ಟು	4,83,68,340
2015-16 ರ ಪಾವತಿಗಳು/ವೆಚ್ಚಗಳು	4,35,99,176
31.03.2016 ಕ್ಕೆ ಅಂತಿಮ ಶಿಲ್ಕು	47,69,164

(ಆ) ಬ್ಯಾಂಕ್ ಖಾತೆಗಳಂತೆ :

ವಿವರ	ಖಾತೆ ಸಂಖ್ಯೆ : 127601101000296	ಖಾತೆ ಸಂಖ್ಯೆ: 64139750276	ಒಟ್ಟು
01.04.2015 ಕ್ಕೆ ಆರಂಭಿಕ ಶಿಲ್ಕು	2,29,91,601	1,59,85,660	3,89,77,261
2015-16 ರ ಸ್ವೀಕೃತಿಗಳು/ಜಮೆಗಳು	31,29,025	63,21,106	94,50,131
ಒಟ್ಟು	2,61,20,626	2,23,06,766	4,84,27,392
2015-16 ರ ಪಾವತಿಗಳು/ವೆಚ್ಚಗಳು	2,18,58,576	2,18,00,825	4,36,59,401
31.03.2016 ಕ್ಕೆ ಅಂತಿಮ ಶಿಲ್ಕು	42,62,050	5,05,941	47,67,991

ಲೆಕ್ಕ ಸಮನ್ವಯ :

(ಇ) ವ್ಯತ್ಯಾಸದ ವಿವರ :

ನಗದು ಪುಸ್ತಕದಂತೆ ಅಂತಿಮ ಶಿಲ್ಕು	47,69,164
ಬ್ಯಾಂಕ್ ಪಾಸ್ ಪುಸ್ತಕದಂತೆ ಅಂತಿಮ ಶಿಲ್ಕು	47,67,991
ವ್ಯತ್ಯಾಸ	1,173

(ಈ) ವ್ಯತ್ಯಾಸಕ್ಕೆ ಕಾರಣ :

ಜಮೆ ಬಾಕಿ		ಪಾವತಿ ಬಾಕಿ		ವ್ಯತ್ಯಾಸ
ನಗದು ಪುಸ್ತಕಕ್ಕೆ ಸ್ವೀಕೃತಗೊಂಡು ಬ್ಯಾಂಕಿಗೆ ಜಮೆಯಾಗದ ಚೆಕ್/ಡಿ.ಡಿಗಳ ಮೊತ್ತ	5,090	ನಗದು ಪುಸ್ತಕದಲ್ಲಿ ಪಾವತಿಯಾಗಿ ಬ್ಯಾಂಕಿನಲ್ಲಿ ನಗದಾಗದ ಚೆಕ್‌ಗಳ ಮೊತ್ತ	2,870	-
ವಸೂಲಾತಿ ಮೊತ್ತದಲ್ಲಿ ಕಡಿಮೆ ಜಮೆಯಾದ ಮೊತ್ತ	100	2014-15 ರ ಸಾಲಿನಲ್ಲಿ ವಸೂಲಿಸಿದ ಮೊತ್ತಕ್ಕಿಂತ ಹೆಚ್ಚಾಗಿ ಇರಸಾಲು ಮಾಡಿರುವ ಮೊತ್ತ	300	-
ಪೋಸ್ಟಲ್ ಆರ್ಡರ್ ನಗದಾಗಿ ಖಾತೆಗೆ ಜಮೆಯಾಗದಿರುವ ಮೊತ್ತ	300	2015-16 ರ ಸಾಲಿನಲ್ಲಿ ಹೆಚ್ಚಾಗಿ ಇರಸಾಲು ಮಾಡಿರುವ ಮೊತ್ತ	1,400	-
ಎರಡು ಬಾರಿ ಸ್ವೀಕೃತಿಗೆ ನಮೂದಿಸಿರುವ (ದಿ:20.05.14 & 27.04.2015) ಮೊತ್ತ	300	ಬ್ಯಾಂಕ್ ಶುಲ್ಕ ಎರಡು ಬಾರಿ ಖರ್ಚು ನಮೂದಿಸಿರುವುದು	62	-
ಬ್ಯಾಂಕ್ ಶುಲ್ಕ ವಾಪಸ್ಸಾಗಿದ್ದು ಜಮೆಗೆ ಸ್ವೀಕರಿಸದಿರುವುದು	15	-	-	-
ಒಟ್ಟು	5,805	ಒಟ್ಟು	4,632	1,173

➢ ನಗದಾಗದ ಚೆಕ್‌ಗಳ ವಿವರ:

ಚೆಕ್‌ಗಳನ್ನು ಬ್ಯಾಂಕಿಗೆ ಜಮೆ ಮಾಡಿದ್ದು ನಗದಾಗದಿರುವುದು		ಚೆಕ್‌ಗಳನ್ನು ನೀಡಿದ್ದು ಬ್ಯಾಂಕಿಗೆ ಹಾಜರುಪಡಿಸದಿರುವುದು	
ಚೆಕ್ ಸಂಖ್ಯೆ/ದಿನಾಂಕ	ಮೊತ್ತ	ಚೆಕ್ ಸಂಖ್ಯೆ/ದಿನಾಂಕ	ಮೊತ್ತ
116982/31.03.16	4,890	599760/19.08.15	2,870
-	300	-	-
ಒಟ್ಟು	5,090	ಒಟ್ಟು	2,870

Scanned with OKEN Scanner

➢ ಹೆಚ್ಚುವರಿ ಜಮೆಗೆ ವಿವರಣೆ :

2014–15 ರ ಅಂತ್ಯಕ್ಕೆ ನಗದು ಪುಸ್ತಕದಲ್ಲಿ ಸ್ವೀಕೃತಗೊಂಡಿರುವ ಮೊತ್ತಕ್ಕಿಂತಲೂ ರೂ.1,700 ಗಳು ಬ್ಯಾಂಕ್ ಖಾತೆಗೆ ಹೆಚ್ಚುವರಿ ಜಮೆಯಾಗಿರುತ್ತವೆ.ಸಾಮಾನ್ಯವಾಗಿ ಶುಲ್ಕವನ್ನು ಡಿ.ಡಿ./ಚೆಕ್‌ಗಳ ಮೂಲಕ ಸ್ವೀಕರಿಸಿದ್ದು, ಡಿ.ಡಿ./ಚೆಕ್‌ಗಳು ನಗದಾದ ಕೂಡಲೇ ರಸೀದಿಗಳನ್ನು ನೀಡದೇ ಇರುವುದರಿಂದ ಹೆಚ್ಚುವರಿ ಜಮೆಯಾದಂತೆ ಕಂಡು ಬಂದಿರುತ್ತದೆ. ಇದಲ್ಲದೆ ಹಲವು ನಿವೇಶನ / ಬದಲಾವಣೆ ಮಾಲೀಕರು ಶುಲ್ಕ ಪಾವತಿಸುವ ಸಂದರ್ಭದಲ್ಲಿ ಡಿ.ಡಿ. ಪಡೆಯುವ ಸಂದರ್ಭದಲ್ಲಿ ಶುಲ್ಕದ ಮೊತ್ತವನ್ನು ಮುಂದಿನ ನೂರು/ಸಾವಿರದ ಸಂಖ್ಯೆಯ ಮೊತ್ತಕ್ಕೆ ಪೂರ್ಣಗೊಳಿಸಿ (Round Off) ಡಿ.ಡಿ. ಪಡೆದಿರುವ ಕಾರಣ ವಸೂಲಿ ಮೊತ್ತಕ್ಕಿಂತ ಹೆಚ್ಚಿಗೆ ಜಮೆಯಾಗಿರುತ್ತದೆ.

2012–13 ರಿಂದ 2015–16 ರವರೆಗಿನ ಆರ್ಥಿಕ ಪರಿಸ್ಥಿತಿಯ ಘೋಷ್ವಾರೆಯನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

13) <u>ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿ</u> :

2015–16ರ ಸಾಲಿನಲ್ಲಿ ಪ್ರಾಧಿಕಾರದಲ್ಲಿ ಸ್ವೀಕರಿಸಿದ ಜಮಾ ಹಾಗೂ ಭರಿಸಲಾದ ವೆಚ್ಚಗಳಿಗೆ ಸಂಬಂಧಿಸಿದಂತೆ ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿಯನ್ನು ನಿರ್ವಹಿಸಿ ಲೆಕ್ಕ ತನಿಖೆಗೆ ಹಾಜರುಪಡಿಸಲಾಗಿದೆ. ಅದರಂತೆ ಹಾಗೂ ಪ್ರಾಧಿಕಾರದವರು ನೀಡಿದ ವಿವರಗಳಂತೆ 2015–16ರ ಸಾಲಿನ ವರ್ಗೀಕೃತ ಜಮಾ ಮತ್ತು ಖರ್ಚಿನ ವಿವರಗಳನ್ನು ಅನುಬಂಧ–2 ರಲ್ಲಿ ವರದಿಗೆ ಲಗತ್ತಿಸಲಾಗಿದೆ.

14) <u>ವಾರ್ಷಿಕ ಆಡಳಿತ ವರದಿ</u> :

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 68 ಡಿ ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಗಳು 1965ರ ನಿಯಮ 29 ರಂತೆ ನಮೂನೆ–5ರಲ್ಲಿ ಜಮಾ ಖರ್ಚುಗಳ ನಮೂನೆಯೊಡನೆ ವಾರ್ಷಿಕ ಆಡಳಿತ ವರದಿಯನ್ನು ತಯಾರಿಸಿ ಸರ್ಕಾರಕ್ಕೆ ಜೂನ್ 30ರೊಳಗಾಗಿ ಸಲ್ಲಿಸಬೇಕಾಗಿರುತ್ತದೆ. 2012–15 ರವರಗಿನ ವಾರ್ಷಿಕ ಆಡಳಿತ ವರದಿಯನ್ನು ತಯಾರಿಸಿ ಸಲ್ಲಿಸಿರುವ ಬಗ್ಗೆ ಲೆಕ್ಕ ಪರಿಶೋಧನೆಗೆ ವಿವರ ಲಭ್ಯವಾಗಿರುವುದಿಲ್ಲ. 2015–16ನೇ ಸಾಲಿನ ವಾರ್ಷಿಕ ವರದಿಯನ್ನು ದಿನಾಂಕ:9–6–2016 ರಂದು ಸಲ್ಲಿಸಲಾಗಿದೆ.

15) <u>ಋಣ ಶೀರ್ಷಿಕೆಗಳು</u> :

1. ಸಾಲಗಳು:

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಸೆಕ್ಷನ್ 40ರಂತೆ ಪ್ರಾಧಿಕಾರವು ಸರ್ಕಾರವು ಪೂರ್ವ ಮಂಜೂರಾತಿಯೊಂದಿಗೆ ಸಾಲಗಳನ್ನು ಪಡೆಯುವ ಅಧಿಕಾರ ಹೊಂದಿರುತ್ತದೆ. ಆದರೆ ಪ್ರಾಧಿಕಾರವು ಯಾವುದೇ ಮೂಲಗಳಿಂದ ಸಾಲಗಳನ್ನು ಪಡೆದಿರುವುದಿಲ್ಲ.

2. ಅನುದಾನಗಳು:

2012–16ರ ಸಾಲಿನಲ್ಲಿ ಪ್ರಾಧಿಕಾರವು ಸರ್ಕಾರದಿಂದಾಗಲೀ ಅಥವಾ ಇತರೆ ಯಾವುದೇ ಮೂಲದಿಂದ ಅನುದಾನಗಳನ್ನು ಪಡೆದಿರುವುದಿಲ್ಲ

3. ವಂತಿಕೆಗಳು:

2012–16ನೇ ಸಾಲಿನಲ್ಲಿ ಪ್ರಾಧಿಕಾರವು ಯಾವುದೇ ವಂತಿಕೆ ಪಾವತಿಸಿಲ್ಲ ಅಥವಾ ವಂತಿಕೆಗಳನ್ನು ಸ್ವೀಕರಿಸಿರುವುದಿಲ್ಲ.

16) <u>ಸಾಮಾನ್ಯ ಆದಾಯ ಮತ್ತು ಸಾಮಾನ್ಯ ವೆಚ್ಚದ ಬಗ್ಗೆ</u> :

ಪ್ರಾಧಿಕಾರದ ಕಳೆದ 4 ವರ್ಷಗಳ ಸಾಮಾನ್ಯ ಆದಾಯ ಮತ್ತು ಸಾಮಾನ್ಯ ವೆಚ್ಚದ ಅಂಕಿ ಅಂಶಗಳು ಈ ಕೆಳಕಂಡಂತಿದೆ.

ಸಾಲು	ಸಾಮಾನ್ಯ ಆದಾಯ	ಸಾಮಾನ್ಯ ಖರ್ಚು
2012–13	15533141	558871
2013–14	14531550	510052
2014–15	22571888	12645421
2015–16	9446105	43599176
ಒಟ್ಟು	**62082684**	**5731352**

ಪ್ರಾಧಿಕಾರವು ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ಕಾಯ್ದೆಯ ಕಲಂ 18ರಂತೆ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ ಕಲಂ 20ರಂತೆ ಸಂಗ್ರಹಿಸುವ ಉತ್ತಮತೆ ಶುಲ್ಕಗಳನ್ನು ಪರಿಷ್ಕರಿಸಿ ಸಾಮಾನ್ಯ ಆದಾಯ ಹೆಚ್ಚಿಸಿಕೊಳ್ಳುವುದು.

Scanned with OKEN Scanner

17) ಉತ್ತಮತೆ ಶುಲ್ಕದ ದರಗಳನ್ನು ಪರಿಷ್ಕರಿಸದಿರುವುದರಿಂದ ಪ್ರಾಧಿಕಾರಕ್ಕೆ ಬರಬಹುದಾಗಿದ್ದ ಹೆಚ್ಚಿನ ಆದಾಯ ತಪ್ಪಿ ನಷ್ಟವಾಗಿರುವುದು :

ಪ್ರಾಧಿಕಾರವು ಖಾಸಗಿ ಭೂ ಪರಿವರ್ತನೆ ವಿನ್ಯಾಸ ನಕ್ಷೆಗಳನ್ನು ಅನುಮೋದಿಸುವಾಗ ಸರ್ಕಾರಿ ಅಧಿಸೂಚನೆ ಹೆಚ್ಯುಡಿ 507 ಟಿಟಿಪಿ 93 ಬೆಂಗಳೂರು ದಿನಾಂಕ:19-11-1993ರಲ್ಲಿ ನಿಗದಿಪಡಿಸಿದ ದರಗಳಂತೆ ಉತ್ತಮತೆ ಶುಲ್ಕವನ್ನು ವಸೂಲಿ ಮಾಡುತ್ತಿರುತ್ತಾರೆ.

ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ಕಾಯ್ದೆ, 1961 ರ ಸೆಕ್ಷನ್ 18ರಲ್ಲಿ ಉತ್ತಮತೆ ಶುಲ್ಕವನ್ನು ಕೆಳಕಂಡ ದರಗಳಲ್ಲಿ ಸಂಗ್ರಹಿಸಬೇಕೆಂದು ಶಾಸನಾತ್ಮಕ ನಿಬಂಧನೆಯನ್ನು ವಿಧಿಸಲಾಗಿದೆ.

"Where Permissions for change of land use or development of land or bulding is granted under section 14A or section 14B or section 15 or section 17 and such change of land use or development is capable or yielding a better income to the owner the planning Authority may levy a prescribed fee not exceeding one- third of the estimated increase in the value of the land or building in the prescribed manner for permitting such change of land use or development of Land or building"

ಪ್ರಸ್ತುತ 1993 ರಲ್ಲಿ ನಿಗದಿಪಡಿಸಿದ ದರಗಳಲ್ಲಿ ಈಗಲೂ ಉತ್ತಮತೆ ಶುಲ್ಕ ವಸೂಲಿ ಮಾಡಲಾಗುತ್ತಿದೆ. ಆದರೆ 1993ರಿಂದ ಇಲ್ಲಿಯವರೆಗೆ ಭೂಮಿಯ ಮೌಲ್ಯದಲ್ಲಿ ಅಗಾಧ ಹೆಚ್ಚಳ ಉಂಟಾಗಿರುತ್ತದೆ. ಸರ್ಕಾರವು ಆಗ್ಗಿಂದಾಗ್ಗೆ ಭೂಮಿಯ ಮಾರ್ಗಸೂಚಿ ಮೌಲ್ಯ (guidance value) ವನ್ನು ಪರಿಷ್ಕರಿಸಿರುತ್ತದೆ. ಆದರೂ ನಗರ ಯೋಜನಾ ಇಲಾಖೆಯ ಉತ್ತಮತೆ ಶುಲ್ಕದ ದರಗಳನ್ನು ಪರಿಷ್ಕರಿಸದಿರುವುದರಿಂದ ಯೋಜನಾ ಪ್ರಾಧಿಕಾರಕ್ಕೆ ಬರಬಹುದಾಗಿದ್ದ 67.10 ಕೋಟಿ ರೂಗಳು ಹೆಚ್ಚುವರಿ ಆದಾಯ ತಪ್ಪಿ ಹೋಗಲು ಕಾರಣವಾಗಿರುತ್ತದೆ. ಪ್ರಾಧಿಕಾರದ ಆಡಳಿತ ವರ್ಗ ಈ ಬಗ್ಗೆ ತತ್‌ಕ್ಷಣದ ಕ್ರಮ ಕೈಗೊಂಡು ಪ್ರಾಧಿಕಾರದ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಕಾಯ್ದೆಯ ನಿಬಂಧನೆಗಳಂತೆ ಕೃಷಿ ಉದ್ದೇಶದಿಂದ ಇತರೆ ಉದ್ದೇಶಕ್ಕೆ ಭೂ ಪರಿವರ್ತನೆಗೊಂಡು ವಿನ್ಯಾಸ ನಕ್ಷೆ ಅನುಮೋದಿಸುವಾಗ ಉತ್ತಮತೆ ಶುಲ್ಕವನ್ನು ನಗರ ಯೋಜನಾ ಪ್ರಾಧಿಕಾರಗಳ ಕಾಯ್ದೆಯ ಸೆಕ್ಷನ್ 18ರಂತೆ ವಸೂಲಿ ಮಾಡಲು ಕ್ರಮ ವಹಿಸುವುದು.

ಪ್ರಾಧಿಕಾರವು 2012-16ರ ಸಾಲುಗಳಲ್ಲಿ ಉತ್ತಮತೆ ಶುಲ್ಕ ಕಡಿಮೆ ವಸೂಲಿಸಿರುವ ವಿವರಗಳನ್ನು ಅನುಬಂಧ-3 ರಲ್ಲಿ ನೀಡಿದೆ.

ಕ್ರ.ಸಂ.	ಸಾಲು	ಉತ್ತಮತೆ ಶುಲ್ಕ ಕಡಿಮೆ ವಸೂಲಿ ಮಾಡಿರುವುದು (ರೂ.ಗಳಲ್ಲಿ)
1	2012-13	158020738.07
2	2013-14	233521344.41
3	2014-15	198277886.17
4	2015-16	81210741.07
	ಒಟ್ಟು	**671030709.7**

ಮೇಲ್ಕಂಡಂತೆ **ರೂ.671030710** ಗಳನ್ನು ಸಂಬಂಧಪಟ್ಟ ಬಡಾವಣೆ ಮಾಲೀಕರಿಂದ ವಸೂಲಿ ಮಾಡುವವರೆಗೂ ಸದರಿ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.

18. ಅಭಿವೃದ್ಧಿಯ ನಂತರ ಮಾರುಕಟ್ಟೆ ಮೌಲ್ಯವನ್ನು ಉಪ ನೋಂದಣಾಧಿಕಾರಿಯವರು ಅವೈಜ್ಞಾನಿಕವಾಗಿ ನಿಗದಿಪಡಿಸಿರುವುದು :

2012-16ನೇ ಸಾಲುಗಳಲ್ಲಿ ತೋರಿಸಿರುವಂತೆ ಉತ್ತಮತಾ ಶುಲ್ಕ ವಸೂಲಾತಿಯು ಋಣಾತ್ಮಕ ಮೌಲ್ಯವಾಗಿರು ವುದು ಕಂಡು ಬಂದಿರುತ್ತದೆ.

ಸಾಲು	ಉತ್ತಮತೆ ಶುಲ್ಕ ಋಣಾತ್ಮಕ ಮೌಲ್ಯ ಕಂಡು ಬಂದಿರುವುದು (ರೂ.ಗಳಲ್ಲಿ)
2012-13	15453997.27
2013-14	7701258.31
2014-15	4153977.24
2015-16	776393.47
ಒಟ್ಟು	**28085626.29**

ಉಪ ನೋಂದಣಾಧಿಕಾರಿಯವರು ಬಡಾವಣೆಯ ಅಭಿವೃದ್ಧಿಯ ನಂತರ ನಿವೇಶನದ ಮಾರುಕಟ್ಟೆ ಮೌಲ್ಯವನ್ನು ವಾಸ್ತವಾಂಶ ಕ್ಕಿಂತ ಕಡಿಮೆ ನಿಗದಿಪಡಿಸಿರುವುದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಪ್ರಕರಣ 18 ರಂತೆ ಪರಿಣಾಮ ಕಾರಿಯಾಗಿ ಅನುಷ್ಠಾನಗೊಳಿಸಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಬರಬೇಕಾದ ಲಾಭಾಂಶದ 1/3 ಭಾಗವನ್ನು ಸಂಬಂಧಿಸಿದ ಬಡಾವಣೆ ಮಾಲೀಕರಿಂದ ವಸೂಲಿಸಲು ಇದರಿಂದ ಸಾಧ್ಯವಾಗುತ್ತಿಲ್ಲ. ಸದರಿ ಬಡಾವಣೆಗಳಲ್ಲಿ ಅಭಿವೃದ್ಧಿ ದರಕ್ಕಿಂತ ನಿವೇಶನದ ಮಾರಾಟ ಬೆಲೆ ಕಡಿಮೆ ಇರುವುದು ಕಂಡು ಬಂದಿರುತ್ತದೆ. ಇದು ಅವೈಜ್ಞಾನಿಕವಾಗಿದ್ದು ಇದರಿಂದ ಪ್ರಾಧಿಕಾರಕ್ಕೆ ನಷ್ಟ ಉಂಟಾಗಿರುತ್ತದೆ. ಈ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಂಡು ನಿಗದಿಪಡಿಸಿರುವ ನಿವೇಶನದ ಮೌಲ್ಯವನ್ನು ಪರಿಷ್ಕರಿಸಿ ಮಾರುಕಟ್ಟೆ ದರದಂತೆ ನಿಗದಿಪಡಿಸಿ

Scanned with OKEN Scanner

ಸರ್ಕಾರಕ್ಕೆ ಹಾಗೂ ಇತರೆ ಸಂಸ್ಥೆಗಳಿಗೆ ಹೆಚ್ಚಿನ ಆದಾಯ ಬರುವಂತೆ ಮಾಡಬಹುದಾಗಿದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಲೆಕ್ಕ ಪರಿಶೋಧನೆಯಲ್ಲಿ ಅಭಿಪ್ರಾಯಿಸಲಾಗಿದೆ.

ಪ್ರಾಧಿಕಾರವು 2012–16ರ ಸಾಲುಗಳ ಕಡತಗಳಲ್ಲಿ ಉತ್ತಮತೆ ಶುಲ್ಕ ಗುಣಾತ್ಮಕ ಮೌಲ್ಯ ಕಂಡು ಬಂದಿರುವ ವಿವರಗಳನ್ನು ಅನುಬಂಧ–4 ರಲ್ಲಿ ನೀಡಿದೆ.

19) <u>ಕೆರೆ ಪುನರುಜ್ಜೀವನ ಶುಲ್ಕ ವಸೂಲಿಸದಿರುವುದು</u> :

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2011 ರ 18ಎ (V) ರಂತೆ ವಿನ್ಯಾಸ ಅನುಮೋದನೆ ಪ್ರಕರಣಗಳಲ್ಲಿ ಒಂದು ಎಕರೆಗೆ ರೂ.100000 ಗಳಂತೆ ಕೆರೆ ಪುನರುಜ್ಜೀವನ ಶುಲ್ಕವನ್ನು ವಿಧಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ ಒಂದು ಎಕರೆಗೆ ರೂ.100000 ಗಳಂತೆ ಕೆರೆ ಪುನರುಜ್ಜೀವನ ಶುಲ್ಕವನ್ನು ವಿಧಿಸಬೇಕಾಗಿರುತ್ತದೆ. 2012–13 ರ ಸಾಲಿನ ಕೆಲವು ಪ್ರಕರಣಗಳಲ್ಲಿ ಕೆರೆ ಪುನರುಜ್ಜೀವನ ಶುಲ್ಕವನ್ನು ವಿಧಿಸಿ ವಸೂಲಿಸಿರುವುದಿಲ್ಲ. ಕೆರೆ ಪುನರುಜ್ಜೀವನ ಶುಲ್ಕವನ್ನು ವಸೂಲಿಸಿ ಕೆರೆ ಪುನರುಜ್ಜೀವನ ಶುಲ್ಕ ಖಾತೆಗೆ ಜಮೆ ಮಾಡುವವರೆಗೆ **ರೂ.3676250** ಗಳನ್ನು ವಸೂಲಾತಿಗೆ ಸೂಚಿಸಿದೆ.

2012–13 ರ ಸಾಲಿನಲ್ಲಿ ಕೆರೆ ಪುನರುಜ್ಜೀವನ ಶುಲ್ಕ ಕಡಿತ ಮಾಡದಿರುವ ವಿವರಗಳನ್ನು ಅನುಬಂಧ–5 ರಲ್ಲಿ ನೀಡಲಾಗಿದೆ.

20) <u>ಖಾಸಗಿ ಬಡಾವಣೆಗಳನ್ನು ರಚಿಸುವ ಸಂದರ್ಭದಲ್ಲಿ ನಗರ ಅಭಿವೃದ್ಧಿ ಪ್ರಾಧಿಕಾರಗಳು ವಿಧಿಸುತ್ತಿರುವ ಮೇಲ್ವಿಚಾರಣೆ ಶುಲ್ಕ ವಸೂಲಿ ಮಾಡದಿರುವುದು</u> :

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ನಅಇ 1025 ಬೆಂಭೂಸ್ವಾ 2003 ಬೆಂಗಳೂರು ದಿನಾಂಕ:9–6–2005 ರ ಅಧೇಶದಂತೆ ಖಾಸಗಿ ಬಡಾವಣೆಗಳನ್ನು ರಚಿಸುವ ಸಂದರ್ಭದಲ್ಲಿ ಪ್ರಾಧಿಕಾರಗಳು ಖಾಸಗಿ ಬಡಾವಣೆಗಳಿಗೆ ಅನುಮತಿಸುವಾಗ ಕಾಮಗಾರಿಗಳ ಅಂದಾಜು ವೆಚ್ಚದ ಮೇಲೆ ಶೇ:4 ರಷ್ಟು ಮೇಲ್ವಿಚಾರಣಾ ಶುಲ್ಕವನ್ನು ವಸೂಲಿ ಮಾಡ ದಿರುವುದು ಕಂಡು ಬಂದಿರುತ್ತದೆ. 2015–16 ರ ಸಾಲಿನಲ್ಲಿ ಕೇವಲ 5 ಕಡತಗಳಲ್ಲಿ ಮಾತ್ರ ಮೇಲ್ವಿಚಾರಣಾ ಶುಲ್ಕವನ್ನು ಪಡೆದಿರುವುದು ಕಂಡು ಬಂದಿರುತ್ತದೆ. ಮೇಲ್ವಿಚಾರಣಾ ಶುಲ್ಕ ವಸೂಲಿ ಮಾಡದಿರುವ ಮೊತ್ತ ರೂ.30681959 ಗಳನ್ನು ಸಂಬಂಧಿಸಿದ ಬಡಾವಣೆ ಮಾಲೀಕರಿಂದ ವಸೂಲಿಸಿ ನಗರಾಭಿವೃದ್ಧಿ ಪ್ರಾಧಿಕಾರದ ನಿಧಿಗೆ ಜಮೆ ಮಾಡುವುದು. ಅಲ್ಲಿಯವರೆಗೂ ಈ ಕೆಳಕಂಡಂತೆ **ರೂ.30681959** ಗಳನ್ನು ವಸೂಲಾತಿಗೆ ಸೂಚಿಸಿದೆ.

ಕ್ರ ಸಂ.	ಸಾಲು	ಮೇಲ್ವಿಚಾರಣೆ ಶುಲ್ಕ ವಸೂಲಿಸದಿರುವುದು (ರೂಗಳಲ್ಲಿ)
1	2012–13	11850906
2	2013–14	9042313
3	2014–15	7077489
4	2015–16	2711251
	ಒಟ್ಟು	**30681959**

ಪ್ರಾಧಿಕಾರವು 2012–16 ರ ಸಾಲಿನ ಕಡತಗಳಲ್ಲಿ ಮೇಲ್ವಿಚಾರಣಾ ಶುಲ್ಕ ವಸೂಲಿ ಮಾಡದಿರುವ ವಿವರಗಳನ್ನು ಅನುಬಂಧ–6 ರಲ್ಲಿ ನೀಡಲಾಗಿದೆ.

21) <u>ಭೂ ಬದಲಾವಣೆ ಶುಲ್ಕ ವಸೂಲಿಗೆ ಸಂಬಂಧಿಸಿದ ಕಡತಗಳನ್ನು ಹಾಜರುಪಡಿಸಿಲ್ಲ</u> :

ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965 ರ 37(ಎ) ರಂತೆ ವಿನ್ಯಾಸ ಅನುಮೋದನೆಯಾದ ಭೂಮಿಯನ್ನು ಒಂದು ಉದ್ದೇಶದಿಂದ ಇನ್ನೊಂದು ಉದ್ದೇಶಕ್ಕೆ ಬದಲಾವಣೆಗೆ ಇಚ್ಚಿಸಿದ ಸಂದರ್ಭದಲ್ಲಿ ಶುಲ್ಕ ವಿಧಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ ವಸತಿ, ಕೈಗಾರಿಕೆ ಹಾಗೂ ವಾಣಿಜ್ಯ ಉದ್ದೇಶಗಳಿಗಾಗಿ ಕ್ರಮವಾಗಿ ರೂ.3, ರೂ.5 ಹಾಗೂ ರೂ.6 ಗಳನ್ನು ಪ್ರತಿ ಚದರ ಮೀಟರ್‌ಗೆ ವಸೂಲಿಸಲಾಗಿರುತ್ತದೆ. ಈ ಕೆಳಕಂಡ ಪ್ರಕರಣಗಳಲ್ಲಿ ಭೂ ಬದಲಾವಣೆ ಶುಲ್ಕ ಸಂಬಂಧ ಕಡತಗಳನ್ನು ಹಾಜರುಪಡಿಸಿರುವುದಿಲ್ಲ. ಹಾಜರು ಪಡಿಸುವವರೆಗೆ **ರೂ.38394** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಕ್ರ.ಸಂ.	ಅರ್ಜಿದಾರರ ಹೆಸರು	ರಸೀದಿ ಸಂಖ್ಯೆ/ದಿನಾಂಕ	ವಸೂಲಿಸಲಾದ ಮೊತ್ತ
1	ಕೆ.ಸಿ.ಮಂಜುನಾಥ್, ಚೆಲುವತಿಮ್ಮನಹಳ್ಳಿ	673/ 25–3–2014	16237=00
2	ಭಾಗ್ಯಲಕ್ಷ್ಮಿ, ಗುವ್ವಲಕಾನಹಳ್ಳಿ	056/ 1–8–2015	22157=00
		ಒಟ್ಟು	**38394=00**

Scanned with OKEN Scanner

22) <u>ನಗರ ಯೋಜನಾ ಮಂಡಳಿಗೆ ಶೇಕಡಾ 5ರ ಪಂತಿಕೆ ಪಾವತಿಸದಿರುವುದು</u> :

• ಪ್ರಾಧಿಕಾರವು ತಾನು ಸಂಗ್ರಹಿಸಿದ ಉತ್ತಮತೆ ಶುಲ್ಕದ ಶೇಕಡಾ 5 ರಷ್ಟನ್ನು ನಗರ ಯೋಜನಾ ಮಂಡಳಿಗೆ ಪಂತಿಕ ರೂಪದಲ್ಲಿ ಪಾವತಿಸಬೇಕಾಗಿರುತ್ತದೆ. ಆದರೆ ಸದರಿ ಪ್ರಾಧಿಕಾರವು 2012–2016 ರಲ್ಲಿ ಪಂತಿಕೆ ಪಾವತಿಸಿರುವುದಿಲ್ಲ. ಲೆಕ್ಕ ತನಿಖಾ ಸಾಲಿನಲ್ಲಿ ಈ ಕೆಳಕಂಡಂತೆ ಉತ್ತಮತೆ ಶುಲ್ಕವನ್ನು ವಸೂಲಿ ಮಾಡಲಾಗಿದೆ

ಸಾಲು	ಮೊತ್ತ
2012–13	1818431
2013–14	1423241
2014–15	2256750
2015–16	739817
ಒಟ್ಟು	6238239

ಮೇಲ್ಕಂಡ ಮೊತ್ತದಲ್ಲಿ ಶೇಕಡಾ 5ರಷ್ಟು ಮೊತ್ತ ಅಂದರೆ ರೂ.311912 ಗಳನ್ನು ನಗರ ಯೋಜನಾ ಮಂಡಳಿಗೆ ಕೂಡಲೇ ಪಾವತಿಸುವುದು. ಅಲ್ಲಿಯವರೆಗೂ **ರೂ.311912** ಆಕ್ಷೇಪಣೆಯಲ್ಲಿಡಲಾಗಿದೆ.

23) <u>ಹೂಡಿಕೆಗಳ ಬಗ್ಗೆ</u> :

ಪ್ರಾಧಿಕಾರವು ಖಾಸಗಿ ಬಡಾವಣೆಗಳ ನಕ್ಷೆ/ವಿನ್ಯಾಸ ಅನುಮೋದಿಸುವಾಗ ಕೆರೆ ಪುನರುಜ್ಜೀವನ ಶುಲ್ಕವನ್ನು ವಸೂಲಿ ಮಾಡುತ್ತಿದ್ದು ಸದರಿ ಮೊತ್ತವನ್ನು ಹಾಗೂ ಹೆಚ್ಚುವರಿ ನಿಧಿಯನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ನಿಶ್ಚಿತ ಠೇವಣಿ ರೂಪದಲ್ಲಿ ತೊಡಗಿಸಲಾಗಿದೆ.

ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ ಸಂಸ್ಥೆಯು ನಿಶ್ಚಿತ ಠೇವಣಿಗಳಿಗೆ ಬಡ್ಡಿಯನ್ನು ನಿಗದಿಪಡಿಸುವ ಅಧಿಕಾರವನ್ನು ಆಯಾ ರಾಷ್ಟ್ರೀಕೃತ ಬ್ಯಾಂಕುಗಳ ವಿವೇಚನೆಗೆ ನೀಡಿರುತ್ತದೆ. ಆದ್ದರಿಂದ, ಪ್ರಾಧಿಕಾರವು ಇನ್ನು ಮುಂದೆ ನಿಶ್ಚಿತ ಠೇವಣಿಗಳಲ್ಲಿ ಹಣ ತೊಡಗಿಸುವ ಮುನ್ನ ವಿವಿಧ ರಾಷ್ಟ್ರೀಕೃತ ಬ್ಯಾಂಕುಗಳಿಂದ ಬಡ್ಡಿಯ ದರಪಟ್ಟಿ ಪಡೆದುಕೊಂಡು ಸ್ಪರ್ಧಾತ್ಮಕವಾದ ರೀತಿಯಲ್ಲಿ ಹಾಗೂ ಪ್ರಾಧಿಕಾರಕ್ಕೆ ಆರ್ಥಿಕವಾಗಿ ಲಾಭದಾಯಕವಾಗುವ ರೀತಿ ತೊಡಗಿಸುವಂತೆ ಕ್ರಮ ಕೈಗೊಳ್ಳಲು ಲೆಕ್ಕ ಪರಿಶೋಧನೆಯಲ್ಲಿ ಅಭಿಪ್ರಾಯ ಪಡಲಾಗಿದೆ.

ಲೆಕ್ಕಪರಿಶೋಧನೆಗೆ ಭೌತಿಕವಾಗಿ ಹಾಜರುಪಡಿಸಿದ ನಿಶ್ಚಿತ ಠೇವಣಿಗಳ ಮೊತ್ತಗಳ ಹೂಡಿಕೆ ಸಂಬಂಧಿಸಿದಂತೆ ಬ್ಯಾಂಕಿನಿಂದ ದೃಢೀಕರಣ ಪತ್ರ (Confirmation of fixed deposit) ಪಡೆದುಕೊಳ್ಳುವುದು.

23(ಎ) <u>ಸಕಾಲದಲ್ಲಿ ಹೂಡಿಕೆಗಳನ್ನು ನವೀಕರಿಸದೆ ಆರ್ಥಿಕ ನಷ್ಟ ಉಂಟು ಮಾಡಿರುವುದು</u> :

2012–13 ರಿಂದ 2015–16 ರವರೆಗಿನ ಪ್ರಾಧಿಕಾರದ ಹೂಡಿಕೆಗಳ ವಿವರಗಳನ್ನು ಪರಿಶೀಲಿಸಲಾಗಿ ದಿನಾಂಕ:15–7–2014 ರಂದು ಬ್ಯಾಂಕ್ ಆಫ್ ಇಂಡಿಯಾದಲ್ಲಿ ಹೂಡಿಕೆ ಮಾಡಲಾಗಿದ್ದ ರೂ.10000000 ಗಳನ್ನು ಸಕಾಲದಲ್ಲಿ ನವೀಕರಿಸದಿರುವುದು ಕಂಡು ಬಂದಿರುತ್ತವೆ. ನಿಶ್ಚಿತ ಠೇವಣಿ ಪತ್ರ ಸಂಖ್ಯೆ:ಕೆಎ 0157751 ರಲ್ಲಿ ರೂ.10000000 ಗಳನ್ನು ಚಿಕ್ಕಬಳ್ಳಾಪುರದ ಬ್ಯಾಂಕ್ ಆಫ್ ಇಂಡಿಯಾದಲ್ಲಿ 15 ತಿಂಗಳ ಅವಧಿಗೆ ದಿನಾಂಕ:15–7–2014 ರಂದು ಶೇ:9.25 ದರದಲ್ಲಿ ಹೂಡಿಕೆ ಮಾಡಿರುತ್ತಾರೆ. ನಿಶ್ಚಿತ ಠೇವಣಿ ಪತ್ರದಲ್ಲಿ ನಮೂದಿಸಿರುವಂತೆ 15 ತಿಂಗಳ ಅಂತ್ಯಕ್ಕೆ ಅಂದರೆ ದಿನಾಂಕ:14–10–2015ಕ್ಕೆ ರೂ.1201130 ಗಳ ಬಡ್ಡಿ ಸಂದಾಯವಾಗಬೇಕಾಗಿರುತ್ತದೆ. ಆದರೆ ರೂ.955829 ಗಳ ಬಡ್ಡಿ ಮಾತ್ರ ಸಂದಾಯವಾಗಿರುತ್ತದೆ. ಅಂದರೆ ರೂ.245301 ಗಳ ಕಡಿಮೆ ಬಡ್ಡಿ ಜಮೆ ಆಗಿರುತ್ತದೆ. ಸದರಿ ನಿಶ್ಚಿತ ಠೇವಣಿಯನ್ನು ದಿನಾಂಕ:1–9–2016 ರಂದು ಹಿಂಪಡೆದಿದ್ದು ಈ ದಿನಾಂಕಕ್ಕೆ ಹಿಂದಿನ ಬಡ್ಡಿಯು ಸೇರಿದಂತೆ ರೂ.1473732 ಬಡ್ಡಿಯನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡಿರುತ್ತಾರೆ. ಮುಂದುವರೆದಂತೆ ಸದರಿ ಹೂಡಿಕೆ ಮೊತ್ತವನ್ನು ದಿನಾಂಕ:15–10–2015 ರಿಂದ ಮರು ಹೂಡಿಕೆ ಮಾಡಿದ್ದಲ್ಲಿ ನಿಶ್ಚಿತ ಠೇವಣಿ ಹಿಂಪಡೆದ ದಿನಾಂಕಕ್ಕೆ ರೂ.949762 ಗಳ ಬಡ್ಡಿ ನೀಡಬೇಕಾಗಿರುತ್ತದೆ. ಆದರೆ ಬ್ಯಾಂಕಿನವರು ಈ ಅವಧಿಗೆ ಕೇವಲ ರೂ.517903 ಗಳ ಬಡ್ಡಿ ಯನ್ನು ನೀಡಿರುತ್ತಾರೆ. ಅಂದರೆ ರೂ.431859 ಗಳ ಕಡಿಮೆ ಬಡ್ಡಿ ನೀಡಿರುತ್ತಾರೆ. ಇದರಿಂದಾಗಿ ಸಂಸ್ಥೆಗೆ ಒಟ್ಟಾರೆ ರೂ.677160 ಗಳು ಆರ್ಥಿಕ ನಷ್ಟ ಉಂಟಾಗಿರುತ್ತದೆ. ಸದರಿ ಆರ್ಥಿಕ ನಷ್ಟಕ್ಕೆ ಈ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿರುವ ಪ್ರಾಧಿಕಾರದ ಆಯುಕ್ತರುಗಳು ನೇರ ಹೊಣೆಗಾರರಾಗಿರುತ್ತಾರೆ. ಇವರ ನಿರ್ಲಕ್ಷತೆಯಿಂದಾಗಿ ಪ್ರಾಧಿಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟವನ್ನು ಸಂಬಂಧಪಟ್ಟ ಆಯುಕ್ತರಿಂದ ವಸೂಲಿಸಿ ಪ್ರಾಧಿಕಾರದ ನಿಧಿಗೆ ಜಮೆ ಮಾಡಲು ಸೂಚಿಸಿದೆ. ಅಲ್ಲಿಯವರೆಗೆ **ರೂ.677160** ಗಳನ್ನು ವಸೂಲಾತಿಗೆ ಸೂಚಿಸಿದೆ.

24) <u>ನಾಗರೀಕ ಸೌಲಭ್ಯಗಳಿಗಾಗಿ ಮೀಸಲಿರಿಸಿದ ನಿವೇಶನ ಹಂಚಿಕೆ ಬಗ್ಗೆ</u> :

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳು (ನಾಗರೀಕ ಸೌಲಭ್ಯಗಳಿಗಾಗಿ ಮೀಸಲಿರಿಸಿದ ನಿವೇಶನಗಳ ಹಂಚಿಕೆ) ನಿಯಮಗಳು 1991 ರಂತೆ ಪ್ರಾಧಿಕಾರವು ಖಾಸಗಿ ಬಡಾವಣೆಗಳ ವಿನ್ಯಾಸ ಅನುಮೋದಿಸುವಾಗ ಗುರುತಿಸಲಾದ ಹಾಗೂ ನಾಗರೀಕ ಸೌಲಭ್ಯಗಳಿಗೆ ಮೀಸಲಿರಿಸಿದ ನಿವೇಶನಗಳನ್ನು ಹಾಗೂ ತಾನು ನಿರ್ಮಿಸಿರುವ ಬಡಾವಣೆಯಲ್ಲಿ ಕಾಯ್ದಿರಿಸಿರುವ ನಾಗರೀಕ ಸೌಲಭ್ಯಗಳಿಗೆ ಮೀಸಲಿರಿಸಿದ ನಿವೇಶನಗಳನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಹಂಚಿಕೆ ಮಾಡುವ ಅಧಿಕಾರ ಹೊಂದಿರುತ್ತದೆ. ಆದರೆ 2012–16 ನೇ ಸಾಲಿನಲ್ಲಿ ಈ ರೀತಿಯ ಯಾವುದೇ ನಿವೇಶನವನ್ನು ಹಂಚಿಕೆ ಮಾಡಿರುವುದಿಲ್ಲವೆಂದು ಲೆಕ್ಕ ಪರಿಶೋಧನೆಗೆ ವಿವರಣೆ ನೀಡಲಾಗಿದೆ.

Scanned with OKEN Scanner

25) <u>ಪಾರ್ಕ್ ಅಭಿವೃದ್ಧಿ ಸೌಲಭ್ಯ</u> :

2012–16 ರ ಸಾಲಿನಲ್ಲಿ ವಿನ್ಯಾಸ ಅನುಮೋದನೆಯಾದ ಲೇಔಟ್‌ಗಳಲ್ಲಿ ಪಾರ್ಕ್ ಅಭಿವೃದ್ಧಿಗೆ ಕಾಯ್ದಿರಿಸಿದ ಜಾಗವನ್ನು ಪ್ರಾಧಿಕಾರದ ಸ್ಥಿರಾಸ್ತಿ ವಹಿಯ ದಾಖಲೆಯಲ್ಲಿ ದಾಖಲಿಸಬೇಕಿತ್ತು. ಆದರೆ ಈ ಬಗ್ಗೆ ದಾಖಲಿಸಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಮುಂದಿನ ಲೆಕ್ಕ ಪರಿಶೋಧನೆಗೆ ವಿವರವನ್ನು ಹಾಜರುಪಡಿಸಲು ಸೂಚಿಸಿದೆ.

26) <u>ವಹಿಗಳ ನಿರ್ವಹಣೆ ಬಗ್ಗೆ</u> :

i. ಸ್ಥಿರಾಸ್ತಿ ಮತ್ತು ಚರಾಸ್ತಿ ವಹಿ :

ಪ್ರಾಧಿಕಾರವು ಹೊಂದಿರುವ ಸ್ಥಿರ ಮತ್ತು ಚರ ಆಸ್ತಿಗಳ ಬಗ್ಗೆ ವಹಿಯನ್ನು ನಿರ್ವಹಿಸುವುದು. ಆರ್ಥಿಕ ವರ್ಷಾಂತ್ಯಕ್ಕೆ ಸಾಮಗ್ರಿಗಳ ಭೌತಿಕ ದಾಸ್ತಾನು ಸತ್ಯಾಪನೆ ಮಾಡಿ ಅದರ ಫಲಿತಾಂಶವನ್ನು ವಹಿಯಲ್ಲಿ ನಮೂದಿಸುವುದು.

ii. ಠೇವಣಿ ವಹಿ :

ಪ್ರಾಧಿಕಾರಕ್ಕೆ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದಾಗ ಸಾರ್ವಜನಿಕರು ಪಾವತಿಸುವ ಪ್ರಾರಂಭಿಕ ಠೇವಣಿ ವಿವರಗಳನ್ನು ಠೇವಣಿ ವಹಿಯಲ್ಲಿ ನಮೂದಿಸಿ ಪ್ರತಿ ವರ್ಷಾಂತ್ಯಕ್ಕೆ ಘೋಷ್ವಾರೆ ನಮೂದಿಸುವುದು. ಠೇವಣಿ ಮರು ಪಾವತಿ ಮಾಡುವಾಗ ಠೇವಣಿ ವಹಿಯಲ್ಲಿ ಷರಾ ನಮೂದಿಸಿ ಮರುಪಾವತಿ ಮಾಡುವುದು.

27) <u>ಸರಕು ಮತ್ತು ಸೇವೆಗಳ ಖರೀದಿಗಳಲ್ಲಿ ಕಂಡು ಬಂದ ನ್ಯೂನತೆಗಳು</u> :

ಸರ್ಕಾರದ ಆದೇಶದ ಸಂಖ್ಯೆ:ಆಇ01 ಟಿಸಿಇ 2012, ಬೆಂಗಳೂರು ದಿನಾಂಕ:21.06.2012 ರಂತೆ ಸರ್ಕಾರಿ ಇಲಾಖೆಗಳಲ್ಲಿನ ಕಛೇರಿಗಳಿಗೆ ಅಗತ್ಯವಿರುವ ಸರಕು ಸಾಮಗ್ರಿಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸುವ ಸಲುವಾಗಿ ಸಾದಿಲ್ವಾರು ವೆಚ್ಚದ ಕೈಪಿಡಿ 1958 ರ ನಿಯಮ 55(49) (ಎ) ರಲ್ಲಿನ ಮಿತಿಯನ್ನು 5000 ಗಳಿಗೆ ಹೆಚ್ಚಿಸಿ ಆದೇಶಿಸ ಲಾಗಿರುತ್ತದೆ. ಅದರಂತೆ ರೂ.5000 ಮೀರಿದ ರೂ.1.00 ಲಕ್ಷಗಳವರೆಗಿನ ಖರೀದಿಗಳನ್ನು ಸ್ಪರ್ಧಾತ್ಮಕ ದರಪಟ್ಟಿಗಳನ್ನು ಕರೆಯುವುದರ ಮೂಲಕ ಖರೀದಿಸಬೇಕಾಗಿರುತ್ತದೆ. ಆದರೆ ಈ ಕಚೇರಿಯಲ್ಲಿ 2012–13 ರಿಂದ 2015–16 ರ ಸಾಲಿನವರೆಗೆ ವಿವಿಧ ಸರಕು ಮತ್ತು ಸೇವೆಗಳನ್ನು ಖರೀದಿಸಿದ್ದು ಖರೀದಿ ಪ್ರಕ್ರಿಯೆಗಳಲ್ಲಿ ಸದರಿ ಆದೇಶವನ್ನು ಸಮರ್ಪಕವಾಗಿ ಪಾಲಿಸಿರುವುದಿಲ್ಲ. ಸರಕು ಮತ್ತು ಸೇವೆಗಳ ಖರೀದಿಗೆ ದರಪಟ್ಟಿಗಳನ್ನು ಮುಕ್ತವಾಗಿ ಆಹ್ವಾನಿಸುವ ಬದಲು ತಮಗೆ ಬೇಕಾದ ಮೂರು ಅಂಗಡಿ/ಗುತ್ತಿಗೆದಾರರು/ಸರಬರಾಜುದಾರರಿಗೆ ಪತ್ರ ಬರೆಯುವ ಮೂಲಕ ದರಪಟ್ಟಿಗಳನ್ನು ಪಡೆಯಲಾಗಿರುತ್ತದೆ. ಇದರಿಂದಾಗಿ ಈ ಕಚೇರಿಗೆ ಖರೀದಿಸಿರುವ ಸರಕು ಮತ್ತು ಸೇವೆಗಳ ದರಗಳಲ್ಲಿ ಸ್ಪರ್ಧಾತ್ಮಕತೆ ಖಾತರಿಯಾಗಿರು ವುದಿಲ್ಲ. ಮುಕ್ತವಾಗಿ ದರಪಟ್ಟಿಗಳನ್ನು ಕರೆದಿದ್ದಲ್ಲಿ ಇನ್ನೂ ಉತ್ತಮವಾದ ಸರಕು ಮತ್ತು ಸೇವೆಗಳು ಕಡಿಮೆ ದರಗಳಲ್ಲಿ ಲಭ್ಯವಾಗುವ ಸಾಧ್ಯತೆ ಗಳಿದ್ದವು. ಲೆಕ್ಕ ತನಿಖೆಯಲ್ಲಿ ಗಮನಿಸಿದಂತೆ ಸ್ಥಳೀಯ ಅಂಗಡಿ/ ಗುತ್ತಿಗೆದಾರರು/ಸರಬರಾಜುದಾರರಿಗಿಂತಲೂ ಹೆಚ್ಚಾಗಿ ಬೆಂಗಳೂರಿನ ವಿವಿಧ ಅಂಗಡಿ/ಗುತ್ತಿಗೆದಾರರು/ಸರಬರಾಜು ದಾರರಿಗೆ ದರಪಟ್ಟಿಗಳನ್ನು ನೀಡಲು ಪತ್ರ ಬರೆದಿದ್ದು ಖರೀದಿ ಪ್ರಕ್ರಿಯೆಗಳಲ್ಲಿ ಸ್ವಹಿತಾಸಕ್ತಿ ಅಡಗಿರ ಬಹುದೆಂದು ಶಂಕಿಸಲಾಗಿದೆ. ಇದಲ್ಲದೆ ಸ್ಥಳೀಯ ಅಂಗಡಿ/ಗುತ್ತಿಗೆದಾರರು/ಸರಬರಾಜುದಾರರನ್ನು ಪರಿಗಣಿಸಿದ್ದಲ್ಲಿ ಸಕಾಲದಲ್ಲಿ ಸರಕು ಮತ್ತು ಸೇವೆಗಳನ್ನು ಲಭ್ಯವಾಗುವ ಜೊತೆಗೆ ವಾರಂಟಿ ಅವಧಿಯಲ್ಲಿ ತ್ವರಿತ ಹಾಗೂ ಉತ್ತಮ ನಿರ್ವಹಣೆ ಮತ್ತು ಸೇವೆಯನ್ನು ಪಡೆಯಲು ಸಾಧ್ಯವಾಗುತ್ತಿತ್ತು.

ಪೀಠೋಪಕರಣ, ಕಂಪ್ಯೂಟರ್ ಖರೀದಿ ಪ್ರಕರಣಗಳಲ್ಲಿ ಕಂಪೆನಿ ಅಥವಾ ಬ್ರಾಂಡ್ (ಉದಾ ಕಂಪ್ಯೂಟರ್ ಖರೀದಿಯಲ್ಲಿ ಲೆನೋವೊ, ಪೀಠೋಪಕರಣಗಳಲ್ಲಿ ಸೂರ್ಯ, ಪ್ರಿಂಟರ್‌ಗಳಿಗೆ ಹೆಚ್.ಪಿ. ಇತ್ಯಾದಿ)ನ್ನು ನಿರ್ದಿಷ್ಟಪಡಿಸಿರುವುದು ಕಂಡು ಬಂದಿದ್ದು, ಇದು ಕೆ.ಟಿ.ಪಿ.ಪಿ. ಕಾಯ್ದೆ 1999 ಮತ್ತು ನಿಯಮಗಳು–2000 ರ ಅನ್ವಯ ನಿಯಮಬಾಹಿರವಾಗಿರುತ್ತದೆ.

ಕೆ.ಎಫ್.ಸಿ. 1958 ನಿಯಮ 164 ಮತ್ತು 165 ರಲ್ಲಿ ವಿವರಿಸಿರುವಂತೆ ಸರ್ಕಾರಿ ಕಚೇರಿಗಳಲ್ಲಿ ಖರೀದಿಸುವ ಸಾಮಗ್ರಿಗಳ ದುರ್ಬಳಕೆ, ಕಳವು, ಮುಂತಾದ ಅಪವ್ಯಯಗಳನ್ನು ತಡೆಯಲು ಖರೀದಿಸಿದ ಸಾಮಗ್ರಿಗಳ ದಾಸ್ತಾನು ಮತ್ತು ಬಳಕೆ ವಿವರಗಳನ್ನು ಇಲಾಖೆಯು ನಿಗದಿ ಪಡಿಸಿದ ನಮೂನೆ ಅಥವಾ ಕೆ.ಎಫ್.ಸಿ. ನಮೂನೆ 33 ಅಥವಾ 34 (ಸಂದರ್ಭಾನುಸಾರ) ಗಳಲ್ಲಿ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ. ಲೆಕ್ಕ ತನಿಖೆ ವೇಳೆಯಲ್ಲಿ ಗಮನಿಸಿದಂತೆ ಯಾವುದೇ ಖರೀದಿಗೆ ಸಂಬಂಧಿಸಿದಂತೆ ದಾಸ್ತಾನು ವಿತರಣೆ ವಹಿಯನ್ನು ನಿರ್ವಹಿಸಿರುವುದಿಲ್ಲ ಹಾಗೂ ಖರೀದಿಸಿ ಪೀಠೋಪಕರಣ, ಲೇಖನ ಸಾಮಗ್ರಿ ಇತ್ಯಾದಿಗಳ ದಾಸ್ತಾನು ಹಾಗೂ ಗುಣಮಟ್ಟವನ್ನು ಬಿಲ್ ಪಾವತಿಸುವ ಮುನ್ನ ಬಟವಾಡೆ ಅಧಿಕಾರಿಗಳು ಪ್ರಮಾಣೀಕರಿಸಿರುವುದಿಲ್ಲ. ಇದರಿಂದ ಬಿಲ್/ವೋಚರ್‌ನಲ್ಲಿ ನಮೂದಿಸಿರುವ ಸಾಮಗ್ರಿಗಳು ಪರಿಮಾಣಕ್ಕೆ ತಕ್ಕಂತೆ ಕಛೇರಿಯಲ್ಲಿ ಸ್ವೀಕೃತಗೊಂಡಿವೆಯೇ ಇಲ್ಲವೇ ಎಂದು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಈ ಎಲ್ಲ ನ್ಯೂನತೆಗಳಿಗೆ ಸಂಬಂಧಿಸಿ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳಿಂದ ವಿವರಣೆ ಅಗತ್ಯವಾಗಿರುತ್ತದೆ. ಅಲ್ಲಿಯವರೆಗೆ ಇವುಗಳಿಗಾಗಿ ಭರಿಸಲಾದ ಮೊತ್ತ **ರೂ.2087291** ಗಳನ್ನು ಆಕ್ಷೇಪಿಸಲಾಗಿದೆ.

2012–13 ರಿಂದ 2015–16 ರ ಸಾಲಿನವರೆಗೆ ಖರೀದಿಸಿರುವ ಸರಕು ಮತ್ತು ಸೇವೆಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

Scanned with OKEN Scanner

ಖರೀದಿಸಿರುವ ಸೇವೆ ಅಥವಾ ಸರಕು	ಸಾಲು	ಪಾವತಿಸಿರುವ ಮೊತ್ತ	ಸೇವೆ ಅಥವಾ ಸರಕುಗಳನ್ನು ಒದಗಿಸಿರುವ ಸಂಸ್ಥೆ/ವ್ಯಕ್ತಿ
ಪೀಠೋಪಕರಣಗಳು–ಸ್ಟೀಲ್ ಅಲ್ಮೆರಾ, ಟೇಬಲ್, ಸ್ಟೀಲ್ ರ್ಯಾಕ್ಸ್ ಇತ್ಯಾದಿ	2012–13	84,702	ಆರ್.ಜಿ.ಇಂಡಸ್ಟ್ರೀಸ್, ಬೆಂಗಳೂರು
ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳು	2014–15	2,57,571	ಜೆನೆಸಿಸ್ ಟೆಕ್ನಾಲಜಿ, ಚಿಕ್ಕಬಳ್ಳಾಪುರ
ಪೀಠೋಪಕರಣಗಳು–ರಿವಾಲ್ವಿಂಗ್ ಚೇರ್, ಕಂಪ್ಯೂಟರ್ ಟೇಬಲ್ ಇತ್ಯಾದಿ	2014–15	97,554	ಸೂರ್ಯ ಇಂಡಸ್ಟ್ರೀಸ್, ಬೆಂಗಳೂರು
ಪೀಠೋಪಕರಣಗಳು– ಆಫೀಸ್ ಟೇಬಲ್, ಸ್ಟೀಲ್ ಡ್ರಾ, ಬೀರು ಇತ್ಯಾದಿ	2014–15	75,570	ಸೂರ್ಯ ಇಂಡಸ್ಟ್ರೀಸ್, ಬೆಂಗಳೂರು
ಲೇಖನ ಸಾಮಗ್ರಿಗಳು	2014–15	99,402	ಪದ್ಮಶ್ರೀ ಎಂಟರ್ ಪ್ರೈಸಸ್, ಬೆಂಗಳೂರು
ಹೊರಗುತ್ತಿಗೆ ಆಧಾರದಲ್ಲಿ ವಾಹನ ಬಾಡಿಗೆಗ ಪಡೆದಿರುವುದು	2014–15	3,24,500	ಜೆ.ಕೆ.ಟ್ರಾವೆಲ್ಸ್, ಬೆಂಗಳೂರು
ಕ್ಸೆರಾಕ್ಸ್ ಯಂತ್ರ ಖರೀದಿಸಿರುವುದು.	2014–15	91,188	ಪ್ರಿಂಟೆಕ್ ಸಿಸ್ಟಮ್ಸ್ ಕಾರ್ಪೋರೇಷನ್. ಬೆಂಗಳೂರು
ನೀರು ಶುದ್ಧೀಕರಣ ಯಂತ್ರ –AQUA GRAND	2014–15	10,534	ನೇಹಾ ಎಂಟರ್ ಪ್ರೈಸಸ್, ಚಿಕ್ಕಬಳ್ಳಾಪುರ
ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ನೇಮಕ ಮಾಡಿಕೊಂಡಿರುವುದು	2014–15 2015–16	10,46,270	ಎಮ್/ಎಸ್ ಎಸ್.ಎ. ಮ್ಯಾನ್ ಪವರ್ ಸರ್ವೀಸಸ್‌ಪ್ರೈ ಲಿ, ಬೆಂಗಳೂರು
ಒಟ್ಟು		**20,87,291**	–

28) <u>ಆದಾಯ ತೆರಿಗೆ ಕಡಿತಗೊಳಿಸದೆ ಬಿಲ್ ಪಾವತಿ ಮಾಡಿರುವುದು</u> :

2012–13 ರಿಂದ 2015–16 ರ ಅವಧಿಯಲ್ಲಿ ಪಾವತಿ ಮಾಡಿರುವ ಈ ಕೆಳಕಂಡ ಬಿಲ್‌ಗಳಲ್ಲಿ ನಿಯಮಾನುಸಾರ ಕಡಿತಗೊಳಿಸ ಬೇಕಾಗಿದ್ದ ಶಾಸನಾತ್ಮಕ ತೆರಿಗೆ ಆದಾಯ ತೆರಿಗೆಯನ್ನು ಕಡಿತಗೊಳಿಸಬೇಕಾಗಿರುತ್ತದೆ. ಆದರೆ ಲೆಕ್ಕ ತಪಾಸಣೆ ವೇಳೆಯಲ್ಲಿ ಈ ಬಿಲ್‌ಗಳಿಗೆ ಮಾಡಿರುವ ಪಾವತಿಗಳನ್ನು ಪರಿಶೀಲಿಸಲಾಗಿ ಆದಾಯ ತೆರಿಗೆಯನ್ನು ಕಟಾಯಿಸದೇ ಪೂರ್ಣ ಮೊತ್ತವನ್ನು ಗುತ್ತಿಗೆ/ಸರಬರಾಜುದಾರರಿಗೆ ಪಾವತಿಸಿರುವುದು ಕಂಡು ಬಂದಿರುತ್ತದೆ. ಯಾವುದೇ ಬಿಲ್ಲನ್ನು ಪಾವತಿಸುವ ಮುನ್ನ ಸರ್ಕಾರಕ್ಕೆ ಸಂದಾಯವಾಗಬೇಕಾದ ತೆರಿಗೆಗಳನ್ನು ಕಟಾಯಿಸಿರುವುದನ್ನು ಬಟವಾಡೆ ಅಧಿಕಾರಿಯು ಖಚಿತಪಡಿಸಿಕೊಳ್ಳಬೇಕಾಗಿರುತ್ತದೆ. ಆದರೆ ಪ್ರಾಧಿಕಾರದ ಬಟವಾಡೆ ಅಧಿಕಾರಿಗಳಾಗಿರುವ ಆಯುಕ್ತರು ಯಾವುದೇ ಬಿಲ್ಲಿನಲ್ಲಿ ಆದಾಯ ತೆರಿಗೆ ಕಟಾಯಿಸದೆ ಬಿಲ್ ಮೊತ್ತವನ್ನು ಪಾವತಿಸಿರುವುದು ಇವರ ಕರ್ತವ್ಯ ಲೋಪ ವಾಗಿರುತ್ತದೆ. ಇದರಿಂದಾಗಿ ತೆರಿಗೆಗಳ ರೂಪದಲ್ಲಿ ಸಂಗ್ರಹವಾಗಬೇಕಾಗಿದ್ದ ಮೊತ್ತವು ಸಂದಾಯ ವಾಗದೆ ಸರ್ಕಾರಕ್ಕೆ ಆರ್ಥಿಕ ನಷ್ಟ ವುಂಟಾಗಿರುತ್ತದೆ. ಆದ್ದರಿಂದ ಕೂಡಲೆ ಕಡಿತಗೊಳಿಸದೆ ಕೈಬಿಟ್ಟಿರುವ ಆದಾಯ ತೆರಿಗೆ ಮೊತ್ತ **ರೂ.99479** ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ಸರ್ಕಾರಕ್ಕೆ ಜಮೆ ಮಾಡಿ ಮೂಲ ಚಲನ್ ಪ್ರತಿಯೊಂದಿಗೆ ವಿವರಗಳನ್ನು ಲೆಕ್ಕ ತನಿಖೆಗೆ ಒದಗಿಸಲು ಸೂಚಿಸಿದೆ.

ವಿವರ	ಪಾವತಿಸಿರುವ ಮೊತ್ತ	ಕಡಿತಗೊಳಿಸ ಬೇಕಾಗಿದ್ದ ಆದಾಯ ತೆರಿಗೆ	ಕಡಿತಗೊಳಿಸಿರುವ ಆದಾಯ ತೆರಿಗೆ	ಕಡಿತಗೊಳಿಸದೆ ಕೈಬಿಟ್ಟಿರುವ ಆದಾಯ ತೆರಿಗೆ
ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ನೇಮಕ ಮಾಡಿಕೊಂಡಿದ್ದು, ಶಾಲೋಮ್ ಸೆಕ್ಯುರಿಟಿ ಸರ್ವೀಸಸ್, ಚಿಕ್ಕಬಳ್ಳಾಪುರ ರವರಿಗೆ ಪಾವತಿಸಿರುವ ಬಿಲ್	3,07,040	6,041	–	6,041
ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ನೇಮಕ ಮಾಡಿಕೊಂಡಿದ್ದು, ಎಮ್/ಎಸ್ ಎಸ್.ಎ. ಮ್ಯಾನ್ ಪವರ್ ಸರ್ವೀಸಸ್‌ಪ್ರೈ ಲಿ, ಬೆಂಗಳೂರು ರವರಿಗೆ ಪಾವತಿಸಿರುವ ಬಿಲ್	10,46,270	20,925	–	20,925
ಕಛೇರಿ ಕಟ್ಟಡ ಬಾಡಿಗೆ ಬಿಲ್ಲಿನ ಬಾಬ್ತು ಶ್ರೀಮತಿ ಭಾಗ್ಯಲಕ್ಷ್ಮಿ ರವರಿಗೆ ಪಾವತಿ ಮಾಡಿರುವುದು.	1,35,347	1,353	–	1,353
ಕಛೇರಿ ಕಟ್ಟಡ ಬಾಡಿಗೆ ಬಿಲ್ಲಿನ ಬಾಬ್ತು ಶ್ರೀಮತಿ ಭಾಗ್ಯಲಕ್ಷ್ಮಿ ರವರಿಗೆ ಪಾವತಿ ಮಾಡಿರುವ ಬಿಲ್	2,74,141	2,741	–	2,741
ಹೊರಗುತ್ತಿಗೆ ಆಧಾರದಲ್ಲಿ ವಾಹನ ಬಾಡಿಗೆಗೆ ಪಡೆದಿದ್ದು ಜೆ.ಕೆ. ಟ್ರಾವೆಲ್ಸ್ ಬೆಂಗಳೂರುರವರಿಗೆ ಪಾವತಿ ಮಾಡಿರುವ ಬಿಲ್	3,24,500	6,490	–	6,490
ಮಹಾಯೋಜನೆ ತಯಾರಿಸಲು ವಿಷನ್ ಸಲ್ಯೂಷನ್, ಹುಬ್ಬಳ್ಳಿ ರವರಿಗೆ ಪಾವತಿಸಿರುವ ಬಿಲ್	5,89,750	58,975	–	58,975
ಪತ್ರಿಕಾ ಪ್ರಕಟಣೆ ಬಿಲ್– ಕೋಲಾರ ವಾಣಿ ಪತ್ರಿಕೆ	36,960	739	–	739

Scanned with OKEN Scanner

ಪತ್ರಿಕಾ ಪ್ರಕಟಣೆ ಬಿಲ್– ಪ್ರಜಾವಾಣಿ ಪತ್ರಿಕೆ	36.450	729	–	729
ಪತ್ರಿಕಾ ಪ್ರಕಟಣೆ ಬಿಲ್– ಉದಯವಾಣಿ ಪತ್ರಿಕೆ	42.600	852	–	852
ಪತ್ರಿಕಾ ಪ್ರಕಟಣೆ ಬಿಲ್– ಉದಯವಾಣಿ ಪತ್ರಿಕೆ	31.680	634	–	634
ಒಟ್ಟು	28.24.738	99.479		99.479

29) <u>ಹೊರಗುತ್ತಿಗೆ ಆಧಾರದ ಮೇಲೆ ನೌಕರರನ್ನು ಪಡೆದಿರುವುದು</u> :

ಕಛೇರಿ ನಿರ್ವಹಣೆಗೆ ಅಗತ್ಯವಿರುವ ಕಿರಿಯ ಅಭಿಯಂತರರು–1, ದ್ವಿತೀಯ ದರ್ಜೆ ಸಹಾಯಕ–1, ಡಾಟಾ ಎಂಟ್ರಿ ಆಪರೇಟರ್–1 ಹಾಗೂ ಜವಾನ–1 ಒಟ್ಟು ನಾಲ್ಕು ಜನ ಸಿಬ್ಬಂದಿಯನ್ನು ಪ್ರಾಧಿಕಾರಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ನೀಡುವ ಸಂಬಂಧ ಮೇ॥ ಎಸ್.ಎ.ಮ್ಯಾನ್ ಪವರ್ ಸರ್ವೀಸಸ್ ಪ್ರೈವೈಟ್ ಲಿಮಿಟೆಡ್, ಬೆಂಗಳೂರು ರವರು ಪ್ರಾಧಿಕಾರದೊಂದಿಗೆ ದಿನಾಂಕ:01.04.2014 (ಕಾರ್ಯಾದೇಶ ಸಂಖ್ಯೆ:ಚಿಯೋಪ್ರಾ/ಚಿಬ/ಬಾಗುಸೇ/2014–15/ 861 ದಿ:02.04.2014) ರಂದು ಮಾಡಿಕೊಂಡಿರುವ ಒಪ್ಪಂದದ ಕರಾರಿನ ಅವಧಿಯು ದಿನಾಂಕ:31.03.2015 ಕ್ಕೆ ಮುಕ್ತಾಯ ವಾಗಿರುತ್ತದೆ. ನಂತರ ದಿನಾಂಕ:12.06.2015 ರ ಪ್ರಾಧಿಕಾರದ ಸಭೆಯ ತೀರ್ಮಾನ 01 ರಂತೆ ಸದರಿಯವರನ್ನೇ ಮುಂದಿನ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳುವವರೆಗೂ ಮುಂದುವರೆಸಲು ಸಭೆಯಲ್ಲಿ ತೀರ್ಮಾನಿಸಲಾಗಿತ್ತು.

ಸಭೆಯ ತೀರ್ಮಾನದಂತೆ ಜಿಲ್ಲಾ ಮಟ್ಟದ ಪತ್ರಿಕೆ ಕೋಲಾರವಾಣಿಯಲ್ಲಿ ದಿನಾಂಕ:11.08.2015 ರಂದು ಈ ಸಂಬಂಧ ಪ್ರಕಟಣೆ ಹೊರಡಿಸಲಾಗಿರುತ್ತದೆ. ಸದರಿ ಪ್ರಕಟಣೆಗೆ ಮೂವರು ಟೆಂಡರ್‌ಗಳನ್ನು ಸಲ್ಲಿಸಿದ್ದರೂ ಸದರಿ ಟೆಂಡರ್‌ಗಳನ್ನು ಪರಿಗಣಿಸದೇ ಇದುವರೆಗೂ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸದೆ ಹಿಂದಿನ ಸಾಲಿನ ಗುತ್ತಿಗೆದಾರರನ್ನೇ ಮುಂದುವರೆಸಿರುವುದು ಕೆ.ಟಿ.ಪಿ.ಪಿ ನಿಯಮ–2000 ದ ಉಲ್ಲಂಘನೆಯಾಗಿರುತ್ತದೆ. ಪ್ರಾಧಿಕಾರಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ನೌಕರರನ್ನು ನೀಡುವ ಸಂಬಂಧ ಪ್ರಾಧಿಕಾರದೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಕರಾರಿನ ಅವಧಿಯು ಮುಕ್ತಾಯಗೊಂಡು ಹನ್ನೆರಡು ತಿಂಗಳು ಗತಿಸಿದರೂ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸದಿರುವುದು ಪ್ರಾಧಿಕಾರದ ಆಯುಕ್ತರ ಕರ್ತವ್ಯ ಲೋಪವಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದಲ್ಲಿ ಪ್ರಾಧಿಕಾರಕ್ಕೆ ಇನ್ನೂ ಹೆಚ್ಚಿನ ಕೌಶಲ್ಯವುಳ್ಳ ನೌಕರರು ಅತಿ ಕಡಿಮೆ ದರದಲ್ಲಿ ಸಿಗುವ ಸಂಭವವಿರುತ್ತಿತ್ತು. ಆದ್ದರಿಂದ ಕೂಡಲೇ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಕೆ.ಟಿ.ಪಿ.ಪಿ ನಿಯಮದಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ.

30) <u>ಪ್ರಾಧಿಕಾರದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ಪಾವತಿ ತಃಖ್ತೆಯನ್ನು ಸರ್ಕಾರದ ಮಂಜೂರಾತಿಗೆ ಸಲ್ಲಿಸಿ ಅನುಮೋದನೆ ಪಡೆದಿಲ್ಲ</u> :

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 1987 ಸೆಕ್ಷನ್ 51 ರಂತೆ ಪ್ರಾಧಿಕಾರವು ಕಾಲಕಾಲಕ್ಕೆ ಅವಶ್ಯವೆನಿಸುವ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ತಃಖ್ತೆಯನ್ನು ತಯಾರಿಸಿ ಸರಕಾರದ ಮಂಜೂರಾತಿಗೆ ಸಲ್ಲಿಸಬೇಕಾಗಿರುತ್ತದೆ. ಸೂಚಿತ ತಃಖ್ತೆಯಲ್ಲಿ ಪ್ರಾಧಿಕಾರವು ಪ್ರತಿ ಸಿಬ್ಬಂದಿಗೆ ನಿಗದಿಪಡಿಸಿದ ವೇತನ ಶ್ರೇಣಿ, ವೇತನ ಮತ್ತು ಭತ್ಯೆಗಳ ವಿವರಗಳನ್ನು ಅನುಮೋದನೆಗೆ ಸಲ್ಲಿಸಿ ಸರ್ಕಾರದ ಮಂಜೂರಾತಿ ಪಡೆದ ಬಳಿಕ ಪಾವತಿಸಬೇಕಾಗಿರುತ್ತದೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ನಅಇ 239 ಬೆಂರೂಪ್ರಾ 2015, ಬೆಂಗಳೂರು, ದಿನಾಂಕ:07.01.2016 ರಂತೆ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವಿವಿಧ ಹುದ್ದೆಗಳನ್ನು ಸೃಜಿಸಲಾಗಿರುತ್ತದೆ. ಸದರಿ ಆದೇಶದಲ್ಲಿ ವಿಧಿಸಿರುವ ಷರತ್ತುಗಳಂತೆ ಮಂಜೂರಾಗಿರುವ ಹುದ್ದೆಗಳನ್ನು ಮುಂದುವರೆಸಲು ಪ್ರತಿ ವರ್ಷ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಮಂಜೂರಾತಿ ಪಡೆಯಬೇಕಾಗಿರುತ್ತದೆ. ಆದರೆ 2012–13 ರಿಂದ ಸದರಿ ಹುದ್ದೆಗಳನ್ನು ಮುಂದುವರೆಸಲು ಯಾವುದೇ ವರ್ಷ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಮಂಜೂರಾತಿ ಪಡೆದುಕೊಂಡಿರುವುದಿಲ್ಲ. ಸದರಿ ಸರ್ಕಾರಿ ಆದೇಶ ಉಲ್ಲಂಘನೆ ಯಾಗಿರುತ್ತದೆ. ಆದ್ದರಿಂದ ಕೂಡಲೆ ಮಂಜೂರಾದ ಹುದ್ದೆಗಳನ್ನು ಮುಂದುವರೆಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆಯಲು ಸೂಚಿಸಿದೆ.

ಸರ್ಕಾರದ ಆದೇಶದಂತೆ ಚಿಕ್ಕಬಳ್ಳಾಪುರ ಅಭಿವೃದ್ಧಿ ಪ್ರಾಧಿಕಾರಕ್ಕೆ ಮಂಜೂರಾಗಿರುವ ಹುದ್ದೆಗಳ ವಿವರ ಕೆಳಕಂಡಂತಿದೆ.

ಹುದ್ದೆಯ ಹೆಸರು	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
ಸಹಾಯಕ ನಗರ ಯೋಜಕ	01	–	01
ನಗರ ಯೋಜಕ ತಾಂತ್ರಿಕ ಸಿಬ್ಬಂದಿ	01	–	01
ಪ್ರಥಮ ದರ್ಜೆ ಸಹಾಯಕ	01	–	01
ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ಲೆಕ್ಕಾಧಿಕಾರಿ	01	–	01
ಸಹಾಯಕ ಅಭಿಯಂತರರು	01	–	01
ಒಟ್ಟು	**05**	–	**05**

31) <u>ಪಿಂಚಣಿ ವಂತಿಕೆ</u> :

ಕೆಸಿಎಸ್ಆರ್ ನಿಯಮ 427 ರಂತೆ ಅನ್ಯ ಸೇವೆಯ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಪಿಂಚಣಿ ವಂತಿಕೆಯನ್ನು 1/8ರಂತೆ ಹಾಗೂ ಶೇ.11 ರಂತೆ ರಜಾ ವೇತನ ವಂತಿಕರಯನ್ನು ಲೆಕ್ಕಾಚಾರ ಮಾಡಿ ರಾಜ್ಯ ಸಂಚಿತ ನಿಧಿ ಪಾವತಿಸಬೇಕಾಗಿರುತ್ತದೆ. 2012–13 ರಿಂದ ಪ್ರಾಧಿಕಾರದಲ್ಲಿ ಇತರೆ ಇಲಾಖೆಗಳಿಂದ ಅನ್ಯ ಸೇವೆಯ ಮೇರೆಗೆ ಯಾರೂ ಕರ್ತವ್ಯ ನಿರ್ವಹಿಸದ ಕಾರಣ ಪಿಂಚಣಿ ವಂತಿಕೆ ಪಾವತಿ ಮಾಡಿರುವು ದಿಲ್ಲ.

Scanned with OKEN Scanner

32) ಮಹಾ ಯೋಜನೆ (ಮಾಸ್ಟರ್ ಪ್ಲಾನ್) ತಯಾರಿಸುವ ಗುತ್ತಿಗೆದಾರರಿಂದ ಭದ್ರತಾ ಠೇವಣಿ ಪಡೆಯದಿರುವುದು :

ಚಿಕ್ಕಬಳ್ಳಾಪುರ ನಗರಾಬಿವೃದ್ಧಿ ಪ್ರಾಧಿಕಾರವು ಪ್ರಾಧಿಕಾರದ ವ್ಯಾಪ್ತಿಗೆ ಬರುವ ಚಿಕ್ಕಬಳ್ಳಾಪುರ ನಗರ ಮತ್ತು ಗ್ರಾಮೀಣ ಪ್ರದೇಶದ ಮಹಾಯೋಜನೆಯನ್ನು ತಯಾರಿಸುವ ಸಲುವಾಗಿ ಟೆಂಡರ್ ಮೂಲಕ ವಿಷನ್ ಸಲ್ಯೂಷನ್ಸ್, ಹುಬ್ಬಳ್ಳಿ ರವರಿಗೆ ದಿನಾಂಕ:18.04.2013 ರಂದು ಕಾರ್ಯದೇಶ (ಕಾರ್ಯಾದೇಶ ಸಂಖ್ಯೆ:ನಯೋಪ್ರಾ/ಚಿಬ/ಮಹಾ ಯೋಜನೆ/ಕರ್ಯಾದೇಶ/01/2012–13/31) ನೀಡಲಾಗಿರುತ್ತದೆ. ನದರಿ ಕಡತವನ್ನು ಪರಿಶೀಲಿಸಲಾಗಿ ಒಟ್ಟು ಮೂವರು ಟೆಂಡರ್ ಸಲ್ಲಿಸಿದ್ದು ವಿಷನ್ ಸಲ್ಯೂಷನ್, ಹುಬ್ಬಳ್ಳಿ ರವರ ಟೆಂಡರ್ ಅರ್ಜಿ ಹೊರತುಪಡಿಸಿ ಉಳಿದವರ ಟೆಂಡರ್ ಅರ್ಜಿಗಳು ಕಡತದಲ್ಲಿ ಲಭ್ಯವಿರುವುದಿಲ್ಲ. ಇದರಿಂದಾಗಿ ವಿಷನ್ ಸಲ್ಯೂಷನ್, ಹುಬ್ಬಳಿರವರಿಗೆ ಅನುಮೋದನೆಯಾಗಿ ರುವ ಟೆಂಡರ್ ದರಗಳ ಸಮರ್ಪಕತೆಯನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.

ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ವಿಷನ್ ಸಲ್ಯೂಷನ್, ಹುಬ್ಬಳಿ ರವರು ರೂ.16,85,000 ಗಳಿಗೆ ಟೆಂಡರ್ ಸಲ್ಲಿಸಿದ್ದು ಟೆಂಡರ್ ದರ ಅನುಮೋದನೆಯಾಗಿರುತ್ತದೆ. ಇವರಿಗೆ ಕಾರ್ಯದೇಶ ನೀಡುವ ಮುನ್ನ ಕೆ.ಟಿ.ಪಿ.ಪಿ. ನಿಯಮಗಳನ್ವಯ ಶೇ.5 ರಷ್ಟು ಅಂದರೆ ರೂ.84,250 ಗಳ ಭದ್ರತಾ ಠೇವಣಿ ಪಡೆದು ಕೊಳ್ಳಬೇಕಾಗಿರುತ್ತದೆ. ಆದರೆ ಟೆಂಡರ್ ಪ್ರಕ್ರಿಯೆಯಲ್ಲಿ ಪಡೆದುಕೊಂಡಿದ್ದ ಶೇ.2.5 ರ ಇ.ಎಂ.ಡಿ. ಹಣವನ್ನು ಹೊಂದಾಣಿಕೆ ಮಾಡಿಕೊಂಡಿದ್ದು ಬಾಕಿ ರೂ.59,250 ಗಳನ್ನು ಇದುವರೆಗೂ ಪಡೆದುಕೊಂಡಿರುವುದಿಲ್ಲ. ಕೂಡಲೇ ವಿಷನ್ ಸಲ್ಯೂಷನ್, ಹುಬ್ಬಳಿ ರವರಿಂದ **ರೂ.59250** ಗಳನ್ನು ವಸೂಲಿಸಿ ಪ್ರಾಧಿಕಾರದ ನಿಧಿಗೆ ಜಮೆ ಮಾಡಲು ಸೂಚಿಸಿದೆ.

33) ನಿಗದಿತ ಅವಧಿಯಲ್ಲಿ ಮಹಾ ಯೋಜನೆ (ಮಾಸ್ಟರ್ ಪ್ಲಾನ್) ತಯಾರಿಸದಿರುವ ಕುರಿತು :

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರವು ಪ್ರಾಧಿಕಾರದ ವ್ಯಾಪ್ತಿಗೆ ಬರುವ ಚಿಕ್ಕಬಳ್ಳಾಪುರ ನಗರ ಮತ್ತು ಗ್ರಾಮೀಣ ಪ್ರದೇಶದ ಮಹಾಯೋಜನೆಯನ್ನು ತಯಾರಿಸುವ ಸಲುವಾಗಿ ಟೆಂಡರ್ ಮೂಲಕ ವಿಷನ್ ಸಲ್ಯೂಷನ್ಸ್, ಹುಬ್ಬಳ್ಳಿ ರವರಿಗೆ ದಿನಾಂಕ:18.04.2013 ರಂದು ಕಾರ್ಯದೇಶ (ಕಾರ್ಯಾದೇಶ ಸಂಖ್ಯೆ:ನಯೋಪ್ರಾ/ಚಿಬ/ಮಹಾ ಯೋಜನೆ/ಕರ್ಯಾದೇಶ/01/2012–13/31) ನೀಡಲಾಗಿರುತ್ತದೆ. ಪ್ರಾಧಿಕಾರವು ವಿಷನ್ ಸಲ್ಯೂಷನ್, ಹುಬ್ಬಳ್ಳಿರವ ರೊಂದಿಗೆ ಮಾಡಿಕೊಂಡಿರುವ ಕರಾರಿನಂತೆ (ಕಂಡಿಕೆ–02) ಎರಡು ತಿಂಗಳು ಅವಧಿಯಲ್ಲಿ ಮಹಾಯೋಜನೆಯನ್ನು ತಯಾರಿಸಿ ಪ್ರಾಧಿಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಬೇಕಾಗಿರುತ್ತದೆ.ಆದರೆ ಕಾರ್ಯಾದೇಶ ಪಡೆದುಕೊಂಡು ಮೂರು ವರ್ಷಗಳು ಗತಿಸಿದ್ದರೂ ಇದುವರೆಗೂ ಮಹಾಯೋಜನೆ ತಯಾರಿಸುವ ಕಾರ್ಯವು ಪೂರ್ಣಗೊಂಡಿರುವುದಿಲ್ಲ. ಇದರಿಂದಾಗಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಹೊಸದಾಗಿ ನಿರ್ಮಾಣಗೊಳ್ಳುವ ಬಡಾವಣೆಗಳಿಗೆ ಅನುಮೋದನೆ ನೀಡಲು ತೊಂದರೆಯಾಗಿರುತ್ತದೆ. ಇದರಿಂದಾಗಿ ಕರಾರಿನ ಕಂಡಿಕೆ–4 ರಲ್ಲಿ ವಿಧಿಸಿರುವ ಷರತ್ತಿನಂತೆ ವಿಳಂಬದ ಅವಧಿಗೆ ಪ್ರತಿದಿನ ಟೆಂಡರ್ ಮೌಲ್ಯದ ಶೇ.0.3 ರಂತೆ ದಂಡ ವಿಧಿಸಬೇಕಾಗಿರುತ್ತದೆ. ದಂಡದ ಮೊತ್ತವು ಟೆಂಡರ್ ಮೌಲ್ಯದ ಶೇ.10 ರಷ್ಟನ್ನು ತಲುಪಿದ್ಯಾಗ್ಯೂ ವಹಿಸಿರುವ ಕಾರ್ಯವು ಪೂರ್ಣಗೊಳ್ಳದಿದ್ದಲ್ಲಿ ಟೆಂಡರ್‌ನ್ನು ರದ್ದುಗೊಳಿಸಬಹುದಾಗಿರುತ್ತದೆ. ಆದರೆ ಪ್ರಾಧಿಕಾರವು ವಿಳಂಬದ ಅವಧಿಗೆ ದಂಡವನ್ನೂ ವಿಧಿಸಿರುವು ದಿಲ್ಲ, ಟೆಂಡರನ್ನೂ ರದ್ದುಪಡಿಸಿರುವುದಿಲ್ಲ. ಇದರಿಂದ ಪರೋಕ್ಷವಾಗಿ ಗುತ್ತಿಗೆದಾರರಿಗೆ ಅನುಕೂಲ ಮಾಡಿಕೊಟ್ಟಂತಾಗಿರುತ್ತದೆ. ಅಲ್ಲದೆ ಮಹಾ ಯೋಜನೆಯ ಅಲಭ್ಯತೆಯಲ್ಲಿ ಬಡಾವಣೆಗಳನ್ನು ಅನುಮೋದಿಸುತ್ತಿರುವುದು ನಿಯಮಬಾಹಿರವಾಗಿರುತ್ತದೆ. ಇದರಿಂದಾಗಿ ಮುಂದಿನ ದಿನಗಳಲ್ಲಿ ಬಡಾವಣೆಗಳನ್ನು ಅಥವಾ ಬಡಾವಣೆಗಳಲ್ಲಿನ ರಸ್ತೆ ಮೊದಲಾದ ಸಾರ್ವಜನಿಕ ಸೌಲಭ್ಯ ಗಳನ್ನು ಹೊಂದಾಣಿಕೆ ಮಾಡಲು ತೊಂದರೆಯಾಗುವ ಸಂಭವಗಳಿರುತ್ತವೆ. ಆದ್ದರಿಂದ ಮಹಾಯೋಜನೆ ತಯಾರಿಸಲು ನಿಗದಿಪಡಿಸಿದ್ದ ಅವಧಿ ಮುಕ್ತಾಯ ವಾಗಿರುವ ಕಾರಣ ಕೂಡಲೆ ಟೆಂಡರ್ ಮೌಲ್ಯದ ಶೇ:10 ರಷ್ಟು ಗರಿಷ್ಟ ದಂಡ ರೂ.1,68,500 ಅಥವಾ ದಿನವೊಂದಕ್ಕೆ ಟೆಂಡರ್ ಮೌಲ್ಯದ ಶೇ.0.3 ರಷ್ಟು 1018 ದಿನಗಳಿಗೆ (ದಿನಾಂಕ:18.04.2013 ರಿಂದ 31.03.2016 ವರಗೆ) ರೂ.5145990 ಇವುಗಳಲ್ಲಿ ಕನಿಷ್ಟ ರೂ.1,68,500 ಗಳನ್ನು ವಿಷನ್ ಸಲ್ಯೂಷನ್ಸ್, ಹುಬ್ಬಳ್ಳಿ ವಸೂಲಿಸಿ ಪ್ರಾಧಿಕಾರದ ನಿಧಿಗೆ ಜಮೆ ಮಾಡಲು ಸೂಚಿಸಿದೆ ಹಾಗೂ ಕರಾರಿನಂತೆ ಯೋಜನೆ ತಯಾರಿಸಲು ನುರಿತ ಅರ್ಹ ಸಿಬ್ಬಂದಿಯನ್ನು ನೇಮಿಸಬೇಕಾಗಿರುತ್ತದೆ. ಆದರೆ ಸಂಸ್ಥೆಯು ಯೋಜನೆ ತಯಾರಿಸಲು ಯಾರನ್ನು ನೇಮಿಸಲಾಗಿ ಅವರ ಅರ್ಹತೆಗಳೇನು ಎಂಬ ವಿವರಗಳು ಕಡತದಲ್ಲಿ ಲಭ್ಯವಿರುವುದಿಲ್ಲ. ಯೋಜನೆ ತಯಾರಿಕೆ ವಿಳಂಬವಾಗಲು ನುರಿತ ಸಿಬ್ಬಂದಿಯ ಕೊರತೆಯೇ ಕಾರಣವಾಗಿರಬಹುದೆಂದು ಲೆಕ್ಕ ತನಿಖೆ ಅಭಿಪ್ರಾಯಪಟ್ಟಿದೆ. ಕೂಡಲೆ ನುರಿತ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡು ಮಹಾ ಯೋಜನೆ ತಯಾರಿಸುವ ಕಾರ್ಯವನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲು ಸೂಚಿಸಿದೆ.

34) ಲೆಕ್ಕ ತನಿಖಾ ಶುಲ್ಕದ ಬಗ್ಗೆ :

2012–16ರ ಸಾಲಿಗೆ ಲೆಕ್ಕಪರಿಶೋಧನಾ ಶುಲ್ಕದ ಲೆಕ್ಕಾಚಾರ ಈ ಕೆಳಕಂಡಂತಿದೆ.

ಕ್ರ ಸಂ	ಸಾಲು	ನಿವ್ವಳ ಜಮಾ	ನಿವ್ವಳ ಖರ್ಚು	ಒಟ್ಟು
1	2012–13	15533141	558871	16092012
2	2013–14	14531550	510052	15041602
3	2014–15	22571888	12645421	35217309
4	2015–16	9446105	43599176	53045281
ಒಟ್ಟು		**62082684**	**57313520**	**119396204**

Scanned with OKEN Scanner

ಒಟ್ಟು ಜಮೆ ಮತ್ತು ಖರ್ಚು	67814036
ಜಮೆಯಲ್ಲಿ ಕಳೆಯಬೇಕಾದದು	
ಬ್ಯಾಂಕ್ ಬಡ್ಡಿ	3508192
ಭದ್ರತಾ ಠೇವಣಿ	25000
ಒಟ್ಟು	3533192
ಒಟ್ಟು ವೆಚ್ಚದಲ್ಲಿ ಕಳೆಯಬೇಕಾದದು	
ಬ್ಯಾಂಕ್ ವೆಚ್ಚ	10059
ನಿಶ್ಚಿತ ಠೇವಣಿ	51800000
ಒಟ್ಟು.	51810059
ಲೆಕ್ಕ ಪರಿಶೋಧನಾ ಶುಲ್ಕದ ಪರಿಗಣಿಸಬೇಕಾಗಿರುವುದು ಜಮೆ ಮತ್ತು ಖರ್ಚು	12470785

ಲೆಕ್ಕ ತನಿಖಾ ಶುಲ್ಕ ಪ್ರತಿ ರೂ.100 ಗಳ ನಿವ್ವಳ ಆರ್ಥಿಕ ವಹಿವಾಟಿಗೆ 0.20 ಪೈಸೆಯಂತೆ ಒಟ್ಟು ರೂ.12470785 ವಹಿವಾಟಿಗೆ ಒಟ್ಟು ರೂ.24942 ಗಳನ್ನು ಈ ಕೆಳಕಂಡ ಲೆಕ್ಕ ಶೀರ್ಷಿಕೆಗೆ ಪಾವತಿಸುವುದು.

$$\frac{12470785 \times 0.20}{100} = \text{ರೂ.}24942$$

ಲೆಕ್ಕ ಶೀರ್ಷಿಕೆ :

0070	ಇತರೆ ಆಡಳಿತ ಸೇವೆಗಳು
60	ಇತರೆ ಸೇವೆಗಳು
110	ಸರ್ಕಾರಿ ಲೆಕ್ಕ ಪರಿಶೋಧನಾ ಶುಲ್ಕ
0-01	ಲೆಕ್ಕ ಪರಿಶೋದನಾ ಶುಲ್ಕ

ಪ್ರಾಧಿಕಾರವು ಸರ್ಕಾರಕ್ಕೆ ಪಾವತಿಸಬೇಕಾದ ಲೆಕ್ಕ ತನಿಖಾ ಶುಲ್ಕದ ಲೆಕ್ಕಾಚಾರ ಈ ಕೆಳಕಂಡಂತಿದೆ.

1-4-2012 ಕ್ಕೆ ಪ್ರಾರಂಭಿಕ ಶಿಲ್ಕು	-
2012-16 ರ ಬೇಡಿಕೆ	24942
ಒಟ್ಟು	24942
2012-16 ರ ಪಾವತಿ	-
31-3-2016 ಕ್ಕೆ ಬಾಕಿ	24942

35) <u>ಸಾಮಾನ್ಯ ಅಭಿಪ್ರಾಯ</u> :

1. ಪ್ರತ್ಯೇಕ ಖಾತೆವಾರು (ಯೋಜನೆವಾರು) ನಗದು ಪುಸ್ತಕ ನಿರ್ವಹಿಸುವುದು.
2. ಹೂಡಿಕೆಗಳ ವಹಿಯನ್ನು ನಿಗಧಿತ ವಹಿಯಲ್ಲಿ ನಿರ್ವಹಿಸಿ ವರ್ಷದ ಅಂತ್ಯದಲ್ಲಿ ಘೋಷ್ವಾರೆ ನಮೂದಿಸುವುದು.
3. ಮುಂಗಡಗಳು ಮತ್ತು ಸಾಲಗಳ ಬಗ್ಗೆ, ನಿಗಧಿತ ಪ್ರತ್ಯೇಕ ವಹಿಗಳನ್ನು ನಿರ್ವಹಿಸುವುದು.
4. ರಸೀದಿ ಪುಸ್ತಕಗಳು ಪ್ರಮುಖವಾಗಿದ್ದು, ಅವುಗಳನ್ನು ಸರಿಯಾದ ರೀತಿ ಮುದ್ರಿಸಿಕೊಂಡು ಕ್ರಮಬದ್ಧವಾಗಿ ಇರಿಸುವುದು.
5. ಪ್ರಾಧಿಕಾರದ ಚರ-ಸ್ಥಿರ ಆಸ್ತಿಗಳ ಬಗ್ಗೆ ಅಗತ್ಯ ಭದ್ರತೆ ವ್ಯವಸ್ಥೆ ಹಾಗೂ ಸೂಕ್ತ ವಹಿಯನ್ನು ನಿರ್ವಹಿಸುವುದು.
6. ಪ್ರಾಧಿಕಾರದಲ್ಲಿ ಹೆಚ್ಚು ಆರ್ಥಿಕ ವಹಿವಾಟುಗಳು ನಡೆಸುತ್ತಿದ್ದು, ಆರ್ಥಿಕವಾಗಿ ಸದೃಢತೆವಾಗಿರುವ ಇಂತಹ ಸಂಸ್ಥೆಗೆ ಒಬ್ಬ ಲೆಕ್ಕಾಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು ಮತ್ತು ನಗದು ಸಹಾಯಕರುಗಳ ಅವಕಶ್ಯಕತೆ ಬಹಳ ಇದ್ದು ಆರ್ಥಿಕ ವ್ಯವಹಾರ ಹಾಗೂ ಲೆಕ್ಕಪತ್ರಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಸಹಾಯಕವಾಗಿರುತ್ತದೆ.
7. ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ಕಾಯ್ದೆಯ ಸೆಕ್ಷನ್ 18 ರಂತೆ ಪ್ರಾಧಿಕಾರವು ಭೂ ಪರಿವರ್ತನೆಗೊಂಡ ಪ್ರಕರಣಗಳಲ್ಲಿ ಬಡಾವಣೆ ನಕ್ಷೆಯನ್ನು ಅನುಮೋದಿಸುವಾಗ ಪರಿಷ್ಕೃತ ಹೆಚ್ಚುವರಿ ಭೂ ಮೌಲ್ಯದ 1/3 ಭಾಗ ಮೀರದಂತೆ ಉತ್ತಮತೆ ಶುಲ್ಕ ವಸೂಲಿ ಮಾಡಬೇಕೆಂಬ ನಿಬಂಧನೆ ಇದ್ದರೂ ಪ್ರಾಧಿಕಾರವು 1994 ರಲ್ಲಿ ನಿಗಧಿಪಡಿಸಿರುವ ದರಗಳಂತೆಯೇ ಉತ್ತಮತೆ ಶುಲ್ಕ ಸಂಗ್ರಹಿಸುತ್ತಿರುವುದರಿಂದ ಪ್ರಾಧಿಕಾರಕ್ಕೆ ಕೋಟ್ಯಾಂತರ ರೂಗಳಷ್ಟು ನಷ್ಟ ಉಂಟಾಗಿದೆ ಎಂದು ಲೆಕ್ಕ ತನಿಖೆಯಲ್ಲಿ ಅಭಿಪ್ರಾಯ ಪಡಲಾಗಿದೆ. ಸರ್ಕಾರವು ಆಗ್ಗಿಂದಾಗ್ಗೆ ಪರಿಷ್ಕರಣೆ ಮಾಡಿರುವ ಮಾರ್ಗಸೂಚಿ ಭೂ ಮೌಲ್ಯಗಳಂತೆ ಉತ್ತಮತೆ ಶುಲ್ಕದ ದರಗಳನ್ನು ಜರೂರಾಗಿ ಪರಿಷ್ಕರಣೆ ಮಾಡುವ ಕ್ರಮ ಅವಶ್ಯಕವಾಗಿದೆ. ಪಿಂಚಣಿ ನಿಧಿಯನ್ನು ಪ್ರಾಧಿಕಾರಕ್ಕೆ ಲಾಭದಾಯಕವಾಗುವಂತೆ ರಾಷ್ಟ್ರೀಕೃತ ಬ್ಯಾಂಕುಗಳ ನಿಶ್ಚಿತ ಠೇವಣಿಯಲ್ಲಿ ತೊಡಗಿಸಬಹುದಾಗಿದೆ.

